ಜನಪದ ವಿಚಾರ

ಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆನೆಕಿವಿನಿಮಿರುವುದುಕನ್ನಡವೆನೆಕುಣಿದಾಡು
ವುದೆನ್ನೆದೆಕನ್ನಡವೆನೆಕಿವಿನಿಮಿರುವುದುಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆ
ನೆಕಿವಿನಿಮಿರುವುದುಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆನೆಕಿವಿನಿಮಿರುವುದು
ಉದಯವಾಗಲಿನಮ್ಮಚೆಲುವಕನ್ನಡನಾಡುಉದಯವಾಗಲಿನಮ್ಮಚೆಲುವ
ಕನ್ನಡನಾಡುಉದಯವಾಗಲಿನಮ್ಮಚೆಲುವಕನ್ನಡನಾಡುಉದಯವಾಗಲಿನಮ್ಮಚೆಲುವ
ಕನ್ನಡನಾಡುಉದಯವಾಗಲಿನಮ್ಮಚೆಲುವಕನ್ನಡನಾಡುಉದಯವಾಗಲಿ
ನಮ್ಮಚೆಲುವಕನ್ನಡನಾಡುಎಲ್ಲಾದರುಇರುಎಂತಾದರುಇರುಎಂದೆಂದಿಗು
ನೀಕನ್ನಡವಾಗಿರುಎಲ್ಲಾದರುಇರುಎಂತಾದರುಇರುಎಂದೆಂದಿಗುನೀಕನ್ನಡವಾಗಿರು
ಎಲ್ಲಾದರುಇರುಎಂತಾದರುಇರುಎಂದೆಂದಿಗುನೀಕನ್ನಡವಾಗಿರುಎಲ್ಲಾದರು
ಇರುಜಯಭಾರತಜನನಿಯತನುಜಾತೆಜಯಹೇಕರ್ನಾಟಕಮಾತೆಜಯಭಾರತ
ಜನನಿಯತನುಜಾತೆಜಯಹೇಕರ್ನಾಟಕಮಾತೆಜಯಭಾರತಜನನಿಯತ
ನುಜಾತೆಜಯಹೇಕರ್ನಾಟಕಮಾತೆಬಾರಿಸುಕನ್ನಡಡಿಂಡಿಮವಓಕರ್ನಾಟಕ
ಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸು
ಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವ
ಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವ
ಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಕನ್ನಡವೆನೆ ಕುಣಿದಾಡುವುದೆನ್ನೆದೆ
ಕನ್ನಡವೆನೆಕಿವಿನಿಮಿರುವುದುಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆನೆ
ಕಿವಿನಿಮಿರುವುದುಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆನೆಕಿವಿನಿಮಿರುವುದು
ಕನ್ನಡವೆನೆಕುಣಿದಾಡುವುದೆನ್ನೆದೆಕನ್ನಡವೆನೆಕಿವಿನಿಮಿರುವುದುಉದಯವಾಗಲಿ
ನಮ್ಮಚೆಲುವಕನ್ನಡನಾಡುಉದಯವಾಗಲಿನಮ್ಮಚೆಲುವಕನ್ನಡನಾಡು
ಉದಯವಾಗಲಿನಮ್ಮಚೆಲುವಕನ್ನಡನಾಡುಉದಯವಾಗಲಿನಮ್ಮಚೆಲುವ
ಕನ್ನಡನಾಡುಉದಯವಾಗಲಿನಮ್ಮಚೆಲುವಕನ್ನಡನಾಡುಉದಯವಾಗಲಿ
ನಮ್ಮಚೆಲುವಕನ್ನಡನಾಡುಎಲ್ಲಾದರುಇರುಎಂತಾದರುಇರುಎಂದೆಂದಿಗು
ನೀಕನ್ನಡವಾಗಿರುಎಲ್ಲಾದರುಇರುಎಂತಾದರುಇರುಎಂದೆಂದಿಗುನೀಕನ್ನಡವಾಗಿರು
ಎಲ್ಲಾದರುಇರುಎಂತಾದರುಇರುಎಂದೆಂದಿಗುನೀಕನ್ನಡವಾಗಿರುಎಲ್ಲಾದರು
ಇರುಜಯಭಾರತಜನನಿಯತನುಜಾತೆಜಯಹೇಕರ್ನಾಟಕಮಾತೆಜಯಭಾರತ
ಜನನಿಯತನುಜಾತೆಜಯಹೇಕರ್ನಾಟಕಮಾತೆಜಯಭಾರತಜನನಿಯತ
ನುಜಾತೆಜಯಹೇಕರ್ನಾಟಕಮಾತೆಬಾರಿಸುಕನ್ನಡಡಿಂಡಿಮವಓಕರ್ನಾಟಕ
ಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸು
ಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವ
ಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವ
ಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಎಲ್ಲಾದರುಇರುಎಂತಾದರು
ಇರುಎಂದೆಂದಿಗುನೀಕನ್ನಡವಾಗಿರುಎಲ್ಲಾದರುಇರುಎಂತಾದರುಇರುಎಂದೆಂದಿಗುನೀ
ಕನ್ನಡವಾಗಿರುಎಲ್ಲಾದರುಇರುಜಯಭಾರತಜನನಿಯತನುಜಾತೆಜಯಹೇ
ಕರ್ನಾಟಕಮಾತೆಜಯಭಾರತಜನನಿಯತನುಜಾತೆಜಯಹೇಕರ್ನಾಟಕ
ಮಾತೆಜಯಭಾರತಜನನಿಯತನುಜಾತೆಜಯಹೇಕರ್ನಾಟಕಮಾತೆಬಾರಿಸು
ಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವ
ಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವ
ಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವ
ಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯ
ಶಿವಎಲ್ಲಾದರುಇರುಎಂತಾದರುಇರುಎಂದೆಂದಿಗುನೀಕನ್ನಡವಾಗಿರುಎಲ್ಲಾದರು
ಇರುಜಯಭಾರತಜನನಿಯತನುಜಾತೆಜಯಹೇಕರ್ನಾಟಕಮಾತೆಜಯ
ಭಾರತಜನನಿಯತನುಜಾತೆಜಯಹೇಕರ್ನಾಟಕ ಮಾತೆಜಯಭಾರತಜನನಿಯತ
ನುಜಾತೆಜಯಹೇಕರ್ನಾಟಕಮಾತೆಬಾರಿಸುಕನ್ನಡಡಿಂಡಿಮವಓಕರ್ನಾಟಕ
ಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸು
ಕನ್ನಡಡಿಂಡಿಮವಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವ
ಓಕರ್ನಾಟಕಹೃದಯಶಿವಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವ
ಬಾರಿಸುಕನ್ನಡಡಿಂಡಿಮವಓಕರ್ನಾಟಕಹೃದಯಶಿವಎಲ್ಲಾದರುಇರುಎಂತಾದರುಇರು

ಜನಪದ ವಿಚಾರದಲ್ಲಿ

ನವೆಂಬರ್ - ೨೦೧೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್- ೨೦೧೭
ಸಂಪುಟ - ೧೮
ಸಂಚಿಕೆ - ೪

ಸಂಚಿಕೆಯ ಸಂಪಾದಕರು

ಕೆ.ಪಿ.ಸುರೇಶ
ಸಂತೋಷ್ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 7829489147
08236 - 299854

email :
janapada@yahoo.com
Web: janapada.org

ಹಚ್ಚೇವು ಕನ್ನಡದ ದೀಪ

ಹಚ್ಚೇವು ಕನ್ನಡದ ದೀಪ - ಕರುನಾಡ ದೀಪ;
ಸಿರಿನುಡಿಯ ದೀಪ;
ಒಲವೆತ್ತಿ ತೋರುವ ದೀಪ!
ಬಹುದಿನಗಳಿಂದ ಮೈಮರವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು
ಅಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರೆತೇವು ಮರೆವ, ತೆರೆದೇವು ಮನವ,
ಎರೆದೇವು ಒಲವ; ಹಿಡಿ, ನೆನಪ!
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ.
ಕಲ್ಪನೆಯ ಕಣ್ಣು ಹರಿವನಕ
ಸಾಲುದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯ ರೂಪ
ಅಚ್ಚಳಿಯದಂತೆ ತೋರೇವು
ಒಡಲೊಳಲ ಕಿಚ್ಚಿನ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು
ಹೊಮ್ಮಿರಲು ಪ್ರೀತಿ ಎಲ್ಲಿನದು ಭೀತಿ?
ನಾಡೊಲವೆ ನೀತಿ; ಹಿಡಿ, ನೆನಪ!
ಮನೆಮನೆಗಳಲ್ಲಿ ಮನಮನಗಳಲ್ಲಿ
ಹಚ್ಚೇವು ಕನ್ನಡದ ದೀಪ.
ನಮ್ಮವರು ಗಳಿಸಿದ ಹೆಸರುಳಿಸಲು ಎಲ್ಲಾರು
ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು
ತೊರೆದೇವು ಮರುಳ, ಕಡೆದೇವು ಇರುಳ,
ಪಡೆದೇವು ತಿರುಳ; ಹಿಡಿ, ನೆನಪ!
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ
ಹಚ್ಚೇವು ಕನ್ನಡದ ದೀಪ.

- ಡಿ.ಎಸ್. ಕರ್ಕಿ

(ಈ ಕವನದ ಬಗೆಗಿನ ಟಿಪ್ಪಣಿಗಾಗಿ ಪುಟ -೩೦ನ್ನು ನೋಡಿ)

ನಿಮ್ಮೊಂದಿಗೆ

ನವೆಂಬರ್ ಮಾಹೆ ಕನ್ನಡವನ್ನು ನೆನೆದು ಕೊಳ್ಳುವ ಮಾಸವಾಗಿ ಬಿಟ್ಟಿದೆ. ನಾವೆಲ್ಲರೂ ನವೆಂಬರ್ ಕನ್ನಡಿಗರಾಗಿ ಬಿಟ್ಟಿದ್ದೇವೆ. ಕನ್ನಡತನವನ್ನು ಬೆಳೆಸಿಕೊಳ್ಳುವ ಕೆಲಸ ಜೀವನ ಪೂರ್ತಿ ನಡೆಯಬೇಕಾದ ಕೆಲಸ. ಕೇವಲ ವರ್ಷದ ಒಂದು ತಿಂಗಳು ಅರಚಾಟಿದರೆ ಅದು ಆಗದ ಕೆಲಸ.ಕನ್ನಡ ನಾಡು ಒಂದಾಗಿ ೬೧ ವರ್ಷಗಳು ಸಂದು ೬೨ ನೇವರ್ಷ ಪ್ರಾರಂಭವಾಗಿದೆ. ಆದರೆ ಕನ್ನಡಕ್ಕೆ ಈ ನೆಲದಲ್ಲಿ ಸಿಗಬೇಕಾದ ಮಾನ್ಯತೆ ಕಡಿಮೆಯಾಗಿ ಹೋಗಿದೆ. ಅದಕ್ಕೆ ರಾಜಕೀಯ ಇಚ್ಛಾ ಶಕ್ತಿಯ ಕೊರತೆಯೇ ವಿನಃ ಬೇರೇನೂ ಅಲ್ಲ. ಈ ಸಂಚಿಕೆಯ ಲೇಖನಗಳೆಲ್ಲವೂ ಪರೋಕ್ಷವಾಗಿ ಅದನ್ನೇ ಹೇಳುತ್ತವೆ.

ಕರ್ನಾಟಕದ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಸಮಸ್ಯೆ ಇಂದು ನಿನ್ನೆಯದಲ್ಲ. ಅದನ್ನು ವಿವರವಾಗಿ ತಮ್ಮ ಲೇಖನದಲ್ಲಿ ಡಾ.ಟಿ.ಆರ್.ಚಂದ್ರಶೇಖರ್ ಅವು ಬರೆದಿದ್ದಾರೆ. ಕನ್ನಡ ಶಾಲೆ ನಡೆಯುವುದಿಲ್ಲ ಎನ್ನುವ ಪರಿಸ್ಥಿತಿಯಲ್ಲೂ ನಾಡಿನ ಹಲವಾರು ಕಡೆ ಕನ್ನಡ ಶಾಲೆ ಯಶಸ್ವಿಯಾಗಿ ನಡೆಯುವಂತೆ ಸ್ಥಳೀಯರು ಮಾಡಿದ್ದಾರೆ. ಒಂದಷ್ಟು ಕನ್ನಡ ಅಭಿಮಾನಿಗಳು ಈ ಕೆಲಸವನ್ನು ಮಾಡ ಬಲ್ಲವರಾದರೆ ಕನ್ನಡ ಸರ್ಕಾರಕ್ಕೆ ಏಕೆ ಮಾಡಲು ಸಾಧ್ಯವಿಲ್ಲ? ಕರ್ನಾಟಕದಲ್ಲಿ ನಡೆಯುತ್ತಿರುವ ಎರಡು ಯಶಸ್ವಿ ಶಾಲೆಗಳ ಬಗ್ಗೆ ತಮ್ಮ ಅನುಭವವನ್ನು ಡಾ. ಎಂ.ಸಿ. ಮನೋಹರ ಹಾಗೂ ಕೆ.ವಾಸು ಅವರು ಈ ಸಂಚಿಕೆಗೆ ಬರೆದು ಕೊಟ್ಟಿದ್ದಾರೆ

ಕನ್ನಡ ನಾಡು ಎಂದರೆ ಕೇವಲ ಭಾಷೆಯಲ್ಲ. ಕನ್ನಡ ನಾಡಿನ ಪರಿಸರವೂ ಅದರ ಪ್ರಮುಖವಾದ ಭಾಗ. ಬದಲಾಗುತ್ತಿರುವ ಕನ್ನಡ ನಾಡಿನ ಪರಿಸರದ ಬಗ್ಗೆ ಮಾಹಿತಿಪೂರ್ಣ ಲೇಖನವನ್ನು ಡಾ.ಟಿ.ಎಸ್ ಚನ್ನೇಶ ಜನಪದ ವಿಚಾರಕ್ಕಾಗಿ ಬರೆದು ಕೊಟ್ಟಿದ್ದಾರೆ.ದೂರದ ದೆಹಲಿಯಲ್ಲಿರುವ ಪ್ರೊ.ಪುರುಷೋತ್ತಮ ಬಿಳಿಮಲೆ ಅವರು ದೆಹಲಿಗೆ ಕೇಳದ ಕನ್ನಡ ದನಿಯ ಬಗ್ಗೆ ಈ ಸಂಚಿಕೆಗೆ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಒಂದು ಭಾಷೆಯನ್ನು ಕೀಳಾಗಿಸಿಕೊಳ್ಳುವ ಪರಿಯನ್ನು ರಹಮತ್ ತರೀಕೆರೆ ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಈ ಲೇಖನ ನಾವು ಕನ್ನಡಿಗರು ಇಂಗ್ಲೀಷ್ ಭಾಷೆಯ ಎದುರು ಬೆಳೆಸಿಕೊಂಡಿರುವ ಕೀಳರಿಮೆಗೆ ಹಿಡಿದ ಕನ್ನಡಿಯಂತಿದೆ. ಸದಾ ನಮ್ಮೊಡನಿರುವ ಕನ್ನಡದ ಹಿರಿಯ ಜೀವ, ಕವಿ ಶ್ರೀನಿವಾಸ ಉಡುಪರು ತಿಂಗಳ ಕವನವನ್ನು ಆಯ್ಕೆ ಮಾಡಿ ಅದಕ್ಕೊಂದು ಸುಂದರ ಟಿಪ್ಪಣಿ ಬರೆದುಕೊಟ್ಟಿದ್ದಾರೆ.

ಹೊಸದಾಗಿ 'ನೂರು ವರ್ಷದ ಹಿಂದೆ ಗಾಂಧಿ' ಎಂಬ ಹೊಸ ಅಂಕಣವನ್ನು ಪ್ರಾರಂಭಿದ್ದೇವೆ. ಅದು ನಿಮಗೆ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇವೆ.

ಮೇಲಿನ ಎಲ್ಲ ಲೇಖಕರ ನೆರವಿನಿಂದ ಈ ಪತ್ರಿಕೆ ಸುಂದರವಾಗಿ ಮತ್ತು ಅರ್ಥಪೂರ್ಣವಾಗಿ ಹೊರಬರಲು ಸಾಧ್ಯವಾಗಿದೆ.

ಕನ್ನಡವನ್ನು ಕಟ್ಟುವ ಕೆಲಸ ನಿರಂತರವಾಗಿ ಸಾಗಲಿ. ●

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯ ವಿವಿಧ ಆಯಾಮಗಳು

- ಡಾ.ಟಿ.ಆರ್.ಚಂದ್ರಶೇಖರ

ಪ್ರಸ್ತಾವನೆ

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಗೆ ಅನೇಕ ಆಯಾಮಗಳಿವೆ. ಅದು ವರಮಾನದ ಕೊರತೆಗೆ ಸಂಬಂಧಿಸಿದ ಸಂಗತಿ ಮಾತ್ರವಲ್ಲ. ಅಥವಾ ಅದು ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ಸೀಮಿತವಾದ ಸಮಸ್ಯೆಯಲ್ಲ. ಇದನ್ನು ಆರ್ಥಿಕ ಸಮಸ್ಯೆಯೆಂದು ವರ್ಗೀಕರಿಸುವುದಕ್ಕೂ ಬರುವುದಿಲ್ಲ. ಅದಕ್ಕೆ ಅನೇಕ ಮುಖಗಳಿವೆ. ಈ ಸಮಸ್ಯೆಯನ್ನು ಎದುರಿಸಲು ಸರ್ಕಾರಗಳು ೧೯೫೬ ರಿಂದಲೂ ಪ್ರಯತ್ನ ನಡೆಸುತ್ತಲೇ ಬಂದಿವೆ. ಅದರಲ್ಲಿ ಸ್ವಲ್ಪವಾದರೂ ಪ್ರಗತಿ ಸಾಧಿಸಲಾಗಿದೆ. ನಮ್ಮ ರಾಜ್ಯದಲ್ಲಿ ೭೦-೮೦ರ ದಶಕಗಳಲ್ಲಿ ಇದ್ದಂತೆ ಸಮಸ್ಯೆಯು ಇಂದು ತೀವ್ರ ಉಲ್ಬಣಾವಸ್ಥೆಯಲ್ಲಿಲ್ಲ. ಎಲ್ಲವೂ ಬಗೆಹರಿದಿದೆ ಎಂದೂ ಭಾವಿಸುವುದಕ್ಕೆ ಅವಕಾಶವಿಲ್ಲ. ಹಾಗಾದರೆ ಏನಿದು ಸಮಸ್ಯೆ? ಅದರ ವಿವಿಧ ಆಯಾಮಗಳಾವುವು? ಅದರ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳು ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ? ಈ ಬಗ್ಗೆ ಇಂದು ಮಾಡಬೇಕಾಗಿರುವುದು ಏನು? ಈ ವಿಷಯಗಳನ್ನು ಕುರಿತಂತೆ ಇಲ್ಲಿ ಚರ್ಚೆ ಮಾಡಲು ಪ್ರಯತ್ನಿಸಲಾಗಿದೆ.

ಭಾಗ ೧

ಒಂದು ಚಾರಿತ್ರಿಕ ಅವಲೋಕನ

ಕರ್ನಾಟಕ ರಾಜ್ಯವು ರಾಜಕೀಯವಾಗಿ ೧೯೫೬ರಲ್ಲಿ ರೂಪುಗೊಂಡ ಬಗೆಯಲ್ಲಿ ಅದರ ಪ್ರಾದೇಶಿಕ ಅಸಮಾನತೆಯ ಬೇರುಗಳನ್ನು ಗುರುತಿಸಬಹುದಾಗಿದೆ. ಮೈಸೂರು ಸುಲ್ತಾನ ಟಿಪ್ಪೂ ನಿಧನದ ನಂತರ ೧೭೯೯ರಲ್ಲಿ ಕರ್ನಾಟಕದ ವಿವಿಧ ಭಾಗಗಳನ್ನು ವಿವಿಧ ಆಡಳಿತ ಭಾಗಗಳಿಗೆ ತಮಗೆ ಅನುಕೂಲವಾಗುವ ರೀತಿಯಲ್ಲಿ ಬ್ರಿಟಿಷರು ಹಂಚಿಬಿಟ್ಟರು. ಯಾವುದನ್ನು ಮೈಸೂರು ಸಂಸ್ಥಾನ ಎಂದು ಕರೆಯಲಾಗುತ್ತಿತ್ತೋ ಅದನ್ನು ಮೈಸೂರು ಅರಸರ ವಶಕ್ಕೆ ೧೮೦೦ರಲ್ಲಿ ನೀಡಿ, ಮತ್ತೆ ೧೮೩೧ರಲ್ಲಿ ತಮ್ಮ ವಶಕ್ಕೆ ಪಡೆದುಕೊಂಡು, ಕೊನೆಗೆ ೧೮೮೧ರಲ್ಲಿ ಅರಸರಿಗೆ ಅದನ್ನು ಬ್ರಿಟಿಷರು ವರ್ಗಾಯಿಸಿದರು.(ಒಂಬತ್ತು ಜಿಲ್ಲೆಗಳು: ಮೈಸೂರು, ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಮಂಡ್ಯ, ಕೋಲಾರ ಮತ್ತು ಬೆಂಗಳೂರು). ಅಂದು ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ಪ್ರದೇಶವಿತ್ತೇ ವಿನಾ ಇಂದು ನಾವು ಭಾವಿಸಿರುವ ಒಂಬತ್ತು ಜಿಲ್ಲೆಗಳಿರಲಿಲ್ಲ. ಮುಂದೆ ೧೮೧೮-೧೮೩೦ ಅವಧಿಯಲ್ಲಿ ಉತ್ತರ ಕರ್ನಾಟಕ ಭಾಗವನ್ನು ವಶಪಡಿಸಿಕೊಂಡ ಬ್ರಿಟಿಷರು ಧಾರವಾಡ(೧೮೨೪) ವಿಜಾಪುರ(೧೮೧೮)

ಬೆಳಗಾವಿ(೧೮೨೪) ಮತ್ತು ಉತ್ತರ ಕನ್ನಡ (೧೮೬೦)ಜಿಲ್ಲೆಗಳನ್ನು ಬಾಂಬೆ ಪ್ರಾಂತಕ್ಕೆ ಸೇರಿಸಿದರು. (ವಾಸ್ತವವಾಗಿ ಕರಾವಳಿ ಪ್ರದೇಶವನ್ನು ಉತ್ತರ ಮತ್ತು ದಕ್ಷಿಣ ಎಂದು ೧೮೫೯ರಲ್ಲಿ ವಿಭಜಿಸಿದರು). ಟಿಪ್ಪೂ ಅಂತ್ಯದ ನಂತರ ೧೭೮೬ರಲ್ಲಿ ರಾಯಚೂರು, ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಹೈದರಾಬಾದ್ ನಿಜಾಮ ಸಾಮ್ರಾಜ್ಯಕ್ಕೆ ಒಪ್ಪಂಧದ ಪ್ರಕಾರ ಬ್ರಿಟಿಷರು ವರ್ಗಾಯಿಸಿದರು. ಅದೇ ರೀತಿಯಲ್ಲಿ ಬಳ್ಳಾರಿ (೧೯೯೯)ಮತ್ತು ದಕ್ಷಣ ಕನ್ನಡ ಜಿಲ್ಲೆಗಳನ್ನು(೧೮೬೨) ಮದರಾಸ್ ಪ್ರಾಂತಕ್ಕೆ ವರ್ಗಾಹಿಸಲಾಯಿತು. ಕೊಡಗು ಪ್ರದೇಶವು 'ಸಿ' ರಾಜ್ಯವಾಗಿ ಕಮೀಷನರ್ ಅವರ ಆಡಳಿತ ವಶದಲ್ಲಿತ್ತು. ಹೀಗೆ ರಾಜ್ಯದ ಭೂಗೋಳಿಕ ಪ್ರದೇಶವು ಹರಿದು ಹಂಚಿ ಹೋಗಿತ್ತು. ವಿವಿಧ ಭಾಷಾ ಪ್ರದೇಶಗಳಲ್ಲಿ ಕನ್ನಡ ಪ್ರದೇಶವು ಸೇರಿಕೊಂಡಿತ್ತು. ಇಂದು ರಾಜ್ಯವು ಎದುರಿಸುತ್ತಿರುವ ಪ್ರಾದೇಶಿಕ ಅಸಮಾನತೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ. ಮೈಸೂರು ಸಂಸ್ಥಾನವು ಅಭಿವೃದ್ಧಿ ಮನೋಭಾವದ ಬ್ರಿಟಿಷ್ ಕಮೀಷನರುಗಳು(ಮಾರ್ಕ್ ಕಬ್ಬನ್ ೧೮೩೪-೧೮೬೧, ಲೆಸ್ಲಿ ಬೌರಿಂಗ್ ೧೮೬೨-೧೮೭೦) ಅರಸರ(ನಾಲ್ವಡಿ ಕೃಷ್ಣರಾಜ ಒಡೆಯರ್-೧೯೦೨-೧೯೪೦) ಮತ್ತು ದಿವಾನರ (ಅರ್. ಎಂ.ವಿಶ್ವೇಶ್ವರಯ್ಯ(೧೯೧೨-೧೯೧೮, ಸರ್. ಮಿರ್ಜಾ ಇಸ್ಮಾಯಿಲ್-೧೯೨೬-೧೯೪೧) ಆಡಳಿತದಿಂದಾಗಿ ೧೯೫೦ರ ವರೆಗೆ ಎಲ್ಲ ವಲಯಗಳಲ್ಲಿಯೂ ಪ್ರಗತಿಯನ್ನು ಸಾಧಿಸಿಕೊಂಡಿತ್ತು. ಮೈಸೂರು 'ಮಾದರಿ ರಾಜ್ಯ' ಎಂದು ಹೆಸರು ಗಳಿಸಿತು. ಅದನ್ನು ಗಾಂಧಿ 'ರಾಮರಾಜ್ಯ' ಎಂದು ಕರೆದರು. ಮಹಾರಾಜರನ್ನು 'ರಾಜರ್ಷಿ' ಎಂದು ಹೊಗಳಿದರು.

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ವಸಾಹತುಶಾಹಿ ಆಡಳಿತದಿಂದಾಗಿ ಸಾಧಾರಣಮಟ್ಟದ ಅಭಿವೃದ್ಧಿಯನ್ನು ಅನುಭವಿಸಿದ್ದವು. ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳು ಅನೇಕ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ೧೯೫೬ರಲ್ಲಿ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿ ಕರ್ನಾಟಕ ರಾಜ್ಯವನ್ನು ಸೇರಿದವು. ಇದರ ಅರ್ಥ ಉಳಿದ ಪ್ರದೇಶಗಳೆಲ್ಲವೂ ಸಮಾನವಾಗಿ ಅಭಿವೃದ್ಧಿ ಸಾಧಿಸಿಕೊಂಡಿದ್ದವು ಎಂದು ಹೇಳಲು ಬರುವುದಿಲ್ಲ. ಉದಾಹರಣೆಗೆ ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರ ಪ್ರದೇಶ, ಹೆಗ್ಗಡದೇವನ ಕೋಟೆ ಮುಂತಾದವು ಇಂದಿಗೂ ಹಿಂದುಳಿದ ಸ್ಥಿತಿಯಲ್ಲಿವೆ. ಪ್ರಾದೇಶಿಕ ಅಸಮಾನತೆ ಅಧ್ಯಯನದ ಉನ್ನತಾಧಿಕಾರ ಸಮಿತಿಯ ವರದಿಯಂತೆ ಗುಲಬರ್ಗಾ ಜಿಲ್ಲೆಯ ನಂತರ ಅತ್ಯಂತ ಹಿಂದುಳಿದ ಜಿಲ್ಲೆ ತುಮಕೂರು. ಇವುಗಳ ಸಮಗ್ರ ದುಸ್ಥಿತಿ ಸೂಚ್ಯಂಕ ಕ್ರಮವಾಗಿ ೩.೩೮ ಮತ್ತು ೧.೬೭. ತುಮಕೂರು ಜಿಲ್ಲೆಯ ನಂತರ ದುಸ್ಥಿತಿಯಲ್ಲಿರುವ ಜಿಲ್ಲೆಗಳೆಂದರೆ ವಿಜಾಪುರ ಮತ್ತು ರಾಯಚೂರು. ಇವುಗಳ ಸಮಗ್ರ ದುಸ್ಥಿತಿ ಸೂಚ್ಯಂಕ ಕ್ರಮವಾಗಿ ೧.೪೦ ಮತ್ತು ೧.೨೦. ಅಂದಮೇಲೆ ಪ್ರಾದೇಶಿಕ ಅಸಮಾನತೆ ಅನ್ನುವುದು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮಾತ್ರ ಸೀಮಿತವಲ್ಲ ಎಂಬುದು ಸ್ಪಷ್ಟ.

ಭಾಗ ೨

ದುಸ್ಥಿತಿಯನ್ನು ಗುರುತಿಸುವ ಕ್ರಮ ಮತ್ತು ಅದರ ಮಾಪನ

ದುಸ್ಥಿತಿಯನ್ನು ಸಾಮಾನ್ಯವಾಗಿ ವರಮಾನದ ಆಧಾರದಲ್ಲಿ ಮಾಪನ ಮಾಡುವುದು ರೂಢಿಯಲ್ಲಿದೆ. ಆದರೆ ವರಮಾನವು ಅಭಿವೃದ್ಧಿಯ ಅಥವಾ ದುಸ್ಥಿತಿಯ ಏಕೈಕ ಮಾಪನವಾಗುವುದು ಸಾಧ್ಯವಿಲ್ಲ. ಏಕೆಂದರೆ ಮಾನವ ಅಭಿವೃದ್ಧಿ ಪ್ರಣಾಳಿಕೆಯು ತೋರಿಸುತ್ತಿರುವಂತೆ ಜಿಲ್ಲೆಯ ವರಮಾನವು ಅಧಿಕಮಟ್ಟದಲ್ಲಿರಬಹುದು. ಆದರೆ ಅಲ್ಲಿ ಉಳಿದ ಸಾಮಾಜಿಕ ಸೂಚ್ಯಂಕಗಳು ಕೆಳಮಟ್ಟದಲ್ಲಿರಬಹುದು. ಉದಾಹರಣೆಗೆ ಬಳ್ಳಾರಿ ಜಿಲ್ಲೆಯು ತಲಾ ವರಮಾನದಲ್ಲಿ(೨೦೧೫-೧೬)ರಾಜ್ಯದಲ್ಲಿ ೧೦ನೆಯ ಸ್ಥಾನದಲ್ಲಿದೆ. ಆದರೆ ಸಾಕ್ಷರತೆಯಲ್ಲಿ(೨೦೧೧) ಅದರ ಸ್ಥಾನ ೨೫. ಆದರೆ ಹಾವೇರಿ ಜಿಲ್ಲೆಯು ತಲಾ ವರಮಾನದಲ್ಲಿ ೨೩ನೆಯ ಸ್ಥಾನದಲ್ಲಿದ್ದರೆ ಸಾಕ್ಷರತೆಯಲ್ಲಿ ಅದು ೧೦ನೆಯ ಸ್ಥಾನದಲ್ಲಿದೆ. ದಾವಣಗೆರೆ ಜಿಲ್ಲೆಯು ತಲಾ ವರಮಾನದಲ್ಲಿ ೨೧ನೆಯ ಸ್ಥಾನದಲ್ಲಿದ್ದರು ಸಾಕ್ಷರತೆಯಲ್ಲಿ ಅದು ೧೩ನೆಯ ಸ್ಥಾನದಲ್ಲಿದೆ. ಈ ಕಾರಣದಿಂದ ಪ್ರಾದೇಶಿಕ ಅಸಮಾನತೆಯನ್ನು, ದುಸ್ಥಿತಿಯನ್ನು, ಹಿಂದುಳಿದಿರುವಿಕೆಯನ್ನು ವರಮಾನವಲ್ಲದೆ ಸಾಮಾಜಿಕ ಸೂಚಿಗಳಾದ ಸಾಕ್ಷರತೆ, ಶಿಶು ಮರಣ ಪ್ರಮಾಣ, ಮಹಿಳೆಯರು ಮತ್ತು ಪುರುಷರ ನಡುವಿನ ಸಾಕ್ಷರತೆಯಲ್ಲಿನ ಅಂತರ, ಜನಸಂಖ್ಯೆಯ ಬೆಳವಣಿಗೆ ಪ್ರಮಾಣ, ೦-೬ ವಯೋಮಾನದ ಮಕ್ಕಳ ಲಿಂಗ ಅನುಪಾತ, ಜನವಲಸೆ ಮುಂತಾದ ಸೂಚಿಗಳನ್ನು ಬಳಸಿ ಮಾಪನ ಮಾಡುವುದು ಹಿಂದುಳಿದಿರುವಿಕೆ ಬಗ್ಗೆ ಹೆಚ್ಚು ಅರ್ಥಪೂರ್ಣವಾದ ಚಿತ್ರವನ್ನು ನಮಗೆ ನೀಡಬಲ್ಲದು.

ಕೋಷ್ಟಕ ೧ ರಲ್ಲಿ ತೋರಿಸಿರುವಂತೆ ಮುಂದುವರಿದಿರುವಿಕೆ ಮತ್ತು ಹಿಂದುಳಿದಿರುವಿಕೆ ಅನ್ನುವುದು ಕರ್ನಾಟಕದ ಎಲ್ಲ ಭಾಗಗಳಿಗೂ ಹರಡಿಕೊಂಡಿವೆ. ಮಾನವ ಅಭಿವೃದ್ಧಿ ಸೂಚ್ಯಂಕವು ಅಭಿವೃದ್ಧಿಯ ಬಹುಮುಖಗಳನ್ನು ಹಿಡಿದಿಡುವ ವಿಸ್ತೃತ ಮಾಪನವಾಗಿದೆ. ಇದು ವರಮಾನವನ್ನು ಸೇರಿಸಿಕೊಂಡು ವಿವಿಧ ೧೧ ಸೂಚಿಗಳನ್ನು ಒಳಗೊಂಡ ಸೂಚ್ಯಂಕವಾಗಿದೆ. ಇದು ಜಿಡಿಪಿಗಿಂತ ಉತ್ತಮವಾದ ಮಾಪನವಾಗಿದೆ. ಈಗಾಗಲೆ ತಿಳಿಸಿರುವಂತೆ ಹಿಂದುಳಿದಿರುವಿಕೆಯನ್ನು ಮಾಪನ ಮಾಡುವುದಾಗಲಿ ಅಥವಾ ಗುರುತಿಸುವುದಾಗಲಿ ಸಮಸ್ಯೆಯಲ್ಲ. ಅದರ ಕಾರಣಗಳು ಮತ್ತು ಅದರ ಪರಿಹಾರಗಳನ್ನು ಕುರಿತ ಚರ್ಚೆಯು ಮುಖ್ಯವಾದುದಾಗಿದೆ.

ಕೋಷ್ಟಕ ೧: ಕರ್ನಾಟಕದಲ್ಲಿ ಮುಂದುವರಿದ ಜಿಲ್ಲೆಗಳ ಮತ್ತು ಹಿಂದುಳಿದ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕ ೨೦೧೪

ಕ್ರ.ಸಂ.	ಹಿಂದುಳಿದ ಜಿಲ್ಲೆಗಳು	ಮಾನವ ಅಭಿವೃದ್ಧಿ ಸೂಚ್ಯಂಕ ೨೦೧೪		ಮುಂದುವರಿದ ಜಿಲ್ಲೆಗಳು	ಮಾನವ ಅಭಿವೃದ್ಧಿ ಸೂಚ್ಯಂಕ ೨೦೧೪	
		ಮೌಲ್ಯ	ಸ್ಥಾನ		ಮೌಲ್ಯ	ಸ್ಥಾನ
೧	ರಾಯಚೂರು	೦.೧೬೫	೩೦	ಬೆಂಗಳೂರು ನಗರ	೦.೯೨೮	೧
೨	ಯಾದಗೀರ್	೦.೧೯೬	೨೯	ದಕ್ಷಿಣ ಕನ್ನಡ	೦.೬೯೧	೨
೩	ಕೊಪ್ಪಳ	೦.೨೮೦	೨೮	ಉಡುಪಿ	೦.೬೭೫	೩
೪	ವಿಜಯಪುರ	೦.೩೩೦	೨೭	ಕೊಡಗು	೦.೬೫೮	೪
೫	ಗದಗ	೦.೩೫೦	೨೬	ಚಿಕ್ಕಮಗಳೂರು	೦.೬೨೭	೫
೬	ಬಳ್ಳಾರಿ	೦.೩೫೪	೨೫	ಧಾರವಾಡ	೦.೬೧೦	೬
೭	ಬಾಗಲಕೋಟೆ	೦.೩೮೪	೨೪	ಬೆಂಗಳೂರು (ಗ್ರಾ)	೦.೬೦೩	೭
೮	ಚಿತ್ರದುರ್ಗ	೦.೩೮೬	೨೩	ಶಿವಮೊಗ್ಗ	೦.೫೯೬	೮
೯	ಚಾಮರಾಜನಗರ	೦.೪೦೧	೨೨	ಹಾಸನ	೦.೫೭೬	೯
೧೦	ಹಾವೇರಿ	೦.೪೦೬	೨೧	ಉತ್ತರ ಕನ್ನಡ	೦.೫೬೫	೧೦

ಮೂಲ: ಕರ್ನಾಟಕ ಸರ್ಕಾರ. ಮಾನವ ಅಭಿವೃದ್ದಿ: ಕರ್ನಾಟಕದ ಜಿಲ್ಲೆಗಳು, ತಾಲ್ಲೂಕುಗಲು ಮತ್ತು ನಗರ ಸ್ಥಳಿಯ ಸಂಸ್ಥೆಗಳ ಸಾಧನೆ ೨೦೧೪, ಯೋಜನೆ, ಕಾರ್ಯಕ್ರಮ ಮೇಲುಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

ಹಿಂದುಳಿದಿರುವ ಜಿಲ್ಲೆಗಳಲ್ಲಿ ಬೆಂಗಳೂರು ವಿಭಾಗಕ್ಕೆ ಸೇರಿದ ಚಿತ್ರದುರ್ಗವಿದೆ, ಬೆಳಗಾವಿ ವಿಭಾಗಕ್ಕೆ ಸೇರಿದ ಗದಗ, ವಿಜಯಪುರ ಜಿಲ್ಲೆಗಳಿವೆ ಮತ್ತು ಮೈಸೂರು ವಿಭಾಗಕ್ಕೆ ಸೇರಿದ ಚಾಮರಾಜನಗರ ಜಿಲ್ಲೆಯಿದೆ. ಅದೇ ರೀತಿಯಲ್ಲಿ ಮುಂದುವರಿದ ಜಿಲ್ಲೆಗಳ ಪಟ್ಟಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಬಿಟ್ಟರೆ ಉಳಿದ ಮೂರು ವಿಭಾಗಕ್ಕೆ ಸೇರಿದ ಜಿಲ್ಲೆಗಳಿವೆ. ಉಳಿದ ಹತ್ತು ಜಿಲ್ಲೆಗಳು ಅಭಿವೃದ್ಧಿಯಲ್ಲಿ ಮಧ್ಯಮಗತಿಯ ಜಿಲ್ಲೆಗಳಾಗಿವೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಪ್ರಾದೇಶಿಕ ಅಸಮಾನತೆ ಅನ್ನುವುದು ರಾಜ್ಯವ್ಯಾಪಿ ಸಮಸ್ಯೆಯಾಗಿದೆ. ಆದರೆ ಅದರ ತೀವ್ರತೆಯು ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ, ಬೆಳಗಾವಿ ವಿಭಾಗದ ವಿಜಯಪುರದಲ್ಲಿ, ಬೆಂಗಳೂರು ವಿಭಾಗದ ತುಮಕೂರು, ಕೋಲಾರ ಜಿಲ್ಲೆಗಳು ಮತ್ತು ಮೈಸೂರು ವಿಭಾಗದ ಚಾಮರಾಜನಗರ ಜಿಲ್ಲೆ ಅದು ಹೆಚ್ಚಿಗಿದೆ.

ಭಾಗ ೩

ಪ್ರಾದೇಶಿಕ ಅಸಮಾನತೆಯ ಕಾರಣಗಳು

ನಮ್ಮ ರಾಜ್ಯವು ಎದುರಿಸುತ್ತಿರುವ ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿ ಅನೇಕ ಸಂಗತಿಗಳು ಕೆಲಸ ಮಾಡುತ್ತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

೧. ಜನಸಂಖ್ಯೆಯ ದೃಷ್ಟಿಯಿಂದ ರಾಜ್ಯದಲ್ಲಿ ಯಾವ ಜಿಲ್ಲೆಗಳು ಹಿಂದುಳಿದಿವೆಯೋ ಅವುಗಳಲ್ಲಿ ಪ.ಜಾ. ಮತ್ತು ಪ.ಪಂ. ಸಮುದಾಯಗಳ ಜನಸಂಖ್ಯೆಯು ರಾಜ್ಯ ಸರಾಸರಿಗಿಂತ(ಶೇ೨೪.೧) ಅಧಿಕವಾಗಿದೆ. ಕೋಷ್ಟಕ ೨ ದಾಖಲಿಸಿರುವಂತೆ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಪ.ಜಾ. ಮತ್ತು ಪ.ಪಂ. ಗಳ ಜನಸಂಖ್ಯೆಯ ಪ್ರಮಾಣ ಸರಾಸರಿ ಶೇ೩೩.೪೯ರಷ್ಟಿದೆ. ಈ ವರ್ಗದ ಬಗ್ಗೆ ವಿಶೇಷ ಗಮನವನ್ನು ನೀಡದ ಕಾರಣಕ್ಕೆ ಈ ಜಿಲ್ಲೆಗಳು ಹಿಂದುಳಿದ ಸ್ಥಿತಿಯಲ್ಲಿವೆ.

೨. ಜನಸಂಖ್ಯೆಗೆ ಸಂಬಂಧಿಸಿದ ಮತ್ತೊಂದು ಸಂಗತಿಯೆಂದರೆ ದುಡಿಮೆಗಾರ ವರ್ಗದ ರಚನೆ. ದುಡಿಯುವ ವರ್ಗದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ವರ್ಗವೆಂದರೆ ಭೂರಹಿತ ದಿನಗೂಲಿ ದುಡಿಮೆಗಾರರು. ನಮ್ಮ ರಾಜ್ಯದಲ್ಲಿ ೨೦೧೧ರ ಜನಗಣತಿ ಪ್ರಕಾರ ಒಟ್ಟು ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ೨೫.೬೪. ಆದರೆ ಇವರ ಪ್ರಮಾಣ ದಕ್ಷಿಣ ಕರ್ನಾಟಕದಲ್ಲಿ ಶೇ೧೮.೪೨ರಷ್ಟಾಗಿದ್ದರೆ ಉತ್ತರ ಕರ್ನಾಟಕದಲ್ಲಿ ಅವರ ಪ್ರಮಾಣ ಶೇ೩೫.೯೮. ಇಲ್ಲಿದೆ ಹಿಂದುಳಿದ ಜಿಲ್ಲೆಗಳ ಹಿಂದುಳಿದಿರುವಿಕೆಯ ಮೂಲದಲ್ಲಿನ ಕಾರಣ.

೩. ಭೂಗೋಳಿಕವಾಗಿ ರಾಜ್ಯದ ಎಲ್ಲ ಹಿಂದುಳಿದ ಜಿಲ್ಲೆಗಳು ದೇಶದ ಬೃಹತ್ ಒಣಭೂಮಿ ಪ್ರದೇಶಕ್ಕೆ ಸೇರುತ್ತವೆ. ರಾಜಾಸ್ಥಾನದಿಂದ ಆರಂಭವಾಗುವ ಈ 'ಸೆಮಿ ಅರಿಡ್' ಭೂಪ್ರದೇಶ ನಮ್ಮ ರಾಜ್ಯದಲ್ಲಿ ಬೀದರ್‌ನಿಂದ ಕೋಲಾರದವರೆಗೆ ಹರಡಿಕೊಂಡಿದೆ. ನಮ್ಮ ರಾಜ್ಯವನ್ನು ಉತ್ತರ-ದಕ್ಷಿಣವಾಗಿ ವಿಭಜಿಸುವುದಕ್ಕೆ ಪ್ರತಿಯಾಗಿ ಪೂರ್ವ ಮತ್ತು ಪಶ್ಚಿಮವಾಗಿ ಎರಡು ಭಾಗವಾಗಿ ಸೀಳಿದರೆ ಎಲ್ಲ ಹಿಂದುಳಿದ ಜಿಲ್ಲೆಗಳು ಪೂರ್ವ ಭಾಗಕ್ಕೆ ಸೇರುತ್ತವೆ. ಮುಖ್ಯವಾಗಿ ಒಣಭೂಮಿ ಪ್ರದೇಶದ ದೃಷ್ಟಿಯಿಂದ ಕರ್ನಾಟಕ ದೇಶದಲ್ಲಿ ಎರಡನೆಯ ರಾಜ್ಯವಾಗಿದೆ.

ಕೋಷ್ಟಕ ೨: ಆಯ್ದ ಜಿಲ್ಲೆಗಳಲ್ಲಿನ ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ.ಗಳ ಪ್ರಮಾಣ ೨೦೧೧

ಕ್ರ. ಸಂ.	ಜಿಲ್ಲೆಗಳ ಹೆಸರು	ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. ಪ್ರಮಾಣ	ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪ.ಪಂ. ಪ್ರಮಾಣ	ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪ.ಜಾ ಮತ್ತು ಪ.ಪಂ. ಪ್ರಮಾಣ
೧	ಬೀದರ್	೨೩.೪೭	೧೩.೮೫	೩೭.೩೨
೨	ಬಳ್ಳಾರಿ	೨೧.೨೦	೧೮.೪೧	೩೯.೫೧
೩	ಚಿತ್ರದುರ್ಗ	೨೩.೪೫	೧೮.೨೩	೪೧.೬೮
೪	ಕೋಲಾರ	೨೫.೨೮	೨.೫೪	೨೭.೮೨
೫	ಚಾಮರಾಜನಗರ	೨೫.೪೨	೧೧.೭೮	೩೭.೨೦

೬	ರಾಯಚೂರು	೨೦.೭೯	೧೯.೦೩	೩೯.೮೨
೭	ಯಾದಗೀರ್	೨೩.೨೮	೧೨.೫೧	೩೫.೭೯
೮	ಕಲಬುರಗಿ	೩೦.೩೨	೫.೧೩	೩೫.೪೫
೯	ಚಿಕ್ಕಬಳ್ಳಾಪುರ	೨೪.೯೦	೧೨.೪೭	೩೭.೩೭
೧೦	ಕರ್ನಾಟಕ	೧೭.೧೫	೬.೯೫	೨೪.೧೦

ಜನಗಣತಿ ೨೦೧೧. ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ಟ್, ಕರ್ನಾಟಕ, ಸೀರೀಸ್ ೩೦. ಡೈರೆಕ್ಟೊರೇಟ್ ಆಫ್ ಸೆನ್ಸಸ್ ಆಫರೇಶನ್,

೪. ರಾಜ್ಯದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರಗಳು ತೆಗೆದುಕೊಂಡ ಕ್ರಮಗಳೆಲ್ಲವೂ ಸರ್ವೇ ಸಾಮಾನ್ಯವಾಗಿ ವರಮಾನ, ಉತ್ಪಾದನೆ, ಬಂಡವಾಳ ಹೂಡಿಕೆ, ಕಾಂಟ್ರಾಕ್ಟುಗಳು ಮುಂತಾದವುಗಳಿಗೆ ಸಂಬಂಧಿಸಿದ್ದವು. ಅವು ಇಲ್ಲಿ ಜನರ ಬದುಕನ್ನು ಉತ್ತಮ ಪಡಿಸುವ ಸಾಕ್ಷರತೆ, ಆರೋಗ್ಯ, ಆಹಾರ, ಮಹಿಳೆಯರ ಅಭಿವೃದ್ಧಿ, ಅಲ್ಪಸಂಖ್ಯಾತರ ಅಭಿವೃದ್ದಿ ಮುಂತಾದ ಸಂಗತಿಗಳಿಗೆ ಗಮನ ನೀಡಲಿಲ್ಲ. ಮುಖ್ಯವಾಗಿ ಸರ್ಕಾರ ಪ್ರಾದೇಶಿಕ ಅಸಮಾನತೆಯ ನಿವಾರಣೆಯನ್ನು 'ಬ್ಯುಸಿನೆಸ್ ಆಸ್ ಯೂಜೆಯಲ್' ಅನ್ನುವ ರೀತಿಯಲ್ಲಿ ನಡೆಸುತ್ತಿದ್ದಾರೆಯೇ ವಿನಾ ಅದನ್ನು ಪ್ರಜ್ಞಾಪೂರ್ವಕವಾಗಿ ಎದುರಿಸುತ್ತಿಲ್ಲ.

೫. ಈ ಸಮಸ್ಯೆಯ ನಿವಾರಣೆಗೆ ಅನುಷ್ಠಾನಗೊಳಿಸಿರುವ ೧೯೯೧ರಲ್ಲಿ ಆರಂಭವಾದ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ೨೦೦೭-೦೮ರಲ್ಲಿ ಆರಂಭವಾದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ, ೨೦೧೪ರಲ್ಲಿ ಜಾರಿಗೊಂಡ ಸಂವಿಧಾನದ ಪರಿಚ್ಛೇದ ೩೭೧ ಜೆ ಕ್ರಮ ಇವಾವುವು ಯಶಸ್ವಿಯಾಗಿಲ್ಲ. ಆಗುವುದು ಸಾಧ್ಯವೂ ಇಲ್ಲ. ಏಕೆಂದರೆ ಇವುಗಳನ್ನು ಈ ಹಿಂದೆ ಹೇಳಿದಂತೆ 'ಬ್ಯುಸಿನೆಸ್ ಆಸ್ ಯೂಜೆಯಲ್' ಕ್ರಮದಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯಾವುದೇ ಕ್ರಮಗಳಿಗೆ ಮಹಿಳಾ ಮುಖವಾಗಲಿ ಅಥವಾ ಪರಿಶಿಷ್ಟ ಆಯಾಮವಾಗಲಿ ಇಲ್ಲ. ಅದಕ್ಕೆ ವಲಸೆಯನ್ನು ತಡೆಯುವ ಗುರಿಯಾಗಲಿ ಇಲ್ಲ.

೬. ಈ ಸಮಸ್ಯೆಗೆ ಅಧಿಕಾರಿಗಳ ಒಂದೇ ಒಂದು ಉತ್ತರವೆಂದರೆ ಹಿಂದುಳಿದ ಜಿಲ್ಲೆಗಳಲ್ಲಿ ಬಂಡವಾಳವನ್ನು ಹೀರಿಕೊಳ್ಳುವ ಸಾಮರ್ಥ್ಯ ಕೆಳಮಟ್ಟದಲ್ಲಿದೆ. ಇದು ದೊಡ್ಡ ಸಂಶೋಧನೆಯೇನಲ್ಲ. ಈ ಕಾರಣಕ್ಕೆ ಅವು ಹಿಂದುಳಿದಿದ್ದಾವೆ. ಅದನ್ನು ಎದುರಿಸುವ ಕ್ರಮಗಳ ಕಾಣುತ್ತಿಲ್ಲ. ಇಲ್ಲಿದೆ ಪ್ರಮುಖ ಸಮಸ್ಯೆ.

೭. ಈ ಹಿಂದೆ ಹೇಳಿದಂತೆ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಅಭಿವೃದ್ಧಿ ನಡದೇ ಇಲ್ಲ ಎಂದು ಹೇಳುವುದು ಸಾಧ್ಯವಿಲ್ಲ. ಅಲ್ಲಿ ಪ್ರಗತಿ ನಡೆದಿದೆ. ಉದಾಹರಣೆಗೆ ನೋಡಿ ಕೋಷ್ಟಕ ೩.

ಕೋಷ್ಟಕ ೩: ಆಯ್ದ ಹಿಂದುಳಿದ ಜಿಲ್ಲೆಗಳ ಒಟ್ಟು ಜಿಲ್ಲಾ ಆಂತರಿಕ ತಲಾ ವರಮಾನ (ಚಾಲ್ತಿ ಬೆಲೆಗಳು) ೨೦೦೫-೦೬ ರಿಂದ ೨೦೧೨-೧೩

ಕ್ರ. ಸಂ.	ಆಯ್ದ ಹಿಂದುಳಿದ ಜಿಲ್ಲೆಗಳು	ಒಟ್ಟು ಜಿಲ್ಲಾ ಆಂತರಿಕ ತಲಾ ವರಮಾನ(ಚಾಲ್ತಿ ಬೆಲೆಗಳು)		
		೨೦೦೫-೦೬	೨೦೧೨-೧೩	ಏರಿಕೆಯ ಶೇಕಡ ಪ್ರಮಾಣ: ೨೦೦೫-೦೬ ರಿಂದ ೨೦೧೨-೧೩
೧	ಬೀದರ್	೧೭೯೦೯	೪೯೯೧೬	ಶೇಕಡ.೧೭೮.೭೨
೨	ಬಳ್ಳಾರಿ	೪೭೪೩೫	೮೫೫೩೮	ಶೇಕಡ. ೮೦.೪೮
೩	ಚಿತ್ರದುರ್ಗ	೨೩೨೨೪	೫೨೭೭೬	ಶೇಕಡ. ೧೨೭.೨೪
೪	ಕೋಲಾರ	೨೨೫೫೪	೬೪೩೯೮	ಶೇಕಡ.೧೭೯.೩೨
೫	ಚಾಮರಾಜನಗರ	೧೮೩೨೭	೪೪೧೬೩	ಶೇಕಡ.೧೪೦.೯೭
೬	ರಾಯಚೂರು	೨೧೩೪೩	೫೩೧೮೭	ಶೇಕಡ.೧೪೯.೨೦
೭	ಯಾದಗೀರ್	--	೪೧೮೪೧	--
೮	ಕಲಬುರಗಿ	೨೩೪೪೨	೫೩೭೩೦	ಶೇಕಡ.೧೨೯.೩೩೩೨.೦೧
೯	ಚಿಕ್ಕಬಳ್ಳಾಪುರ	--	೪೮೮೪೪	--
೧೦	ಕರ್ನಾಟಕ	೩೪೯೭೧	೮೬೪೪೮	ಶೇಕಡ.೧೪೭.೧೯

ಕೋಷ್ಟಕ ೩ ರಲ್ಲಿನ ವಿವರಗಳಿಂದ ಸ್ಪಷ್ಟವಾಗುವಂತೆ ಹಿಂದುಳಿದ ೯ ಜಿಲ್ಲೆಗಳಲ್ಲಿ ವರಮಾನವು ೨೦೦೫-೦೬ರಿಂದ ೨೦೧೨-೧೩ರ ಅವಧಿಯಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ಸಮಸ್ಯೆಯಿರುವುದು ವರಮಾನದಲ್ಲಿ ಅಲ್ಲ. ಈ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ, ಆಹಾರ ಅಭದ್ರತೆ, ಮಹಿಳೆಯರ ಮೇಲಿನ ಹಿಂಸೆ, ಅಪೌಷ್ಟಿಕತೆ, ಅಧಿಕಾರ ವರ್ಗದ ಔದಾಸೀನ್ಯ ಮನೋಭಾವ, ಖಾಲಿಯಿರುವ ಸರ್ಕಾರಿ ಹುದ್ದೆಗಳು, ಜನವಲಸೆ ಮುಂತಾದವುಗಳ ಬಗ್ಗೆ ಎಷ್ಟು ಗಮನ ಹರಿಯಬೇಕಿತ್ತೊ ಅಷ್ಟು ಗಮನ ಹರಿಯಲಿಲ್ಲ.

೮. ಅನೇಕ ಇತಿಹಾಸಜ್ಞರು ವಾದಿಸುವಂತೆ ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮಾನತೆಯು ವಸಾಹತುಶಾಹಿಯ ಉತ್ಪನ್ನ(ಬಿ. ಸುರೇಂದ್ರ ರಾವ್೨೦೧೬). ವಸಹಾತುಶಾಹಿ ಆಡಳಿತವು ತನಗೆ ಅನುಕೂಲವಾಗುವಂತೆ ರಾಜ್ಯವನ್ನು ವಿವಿಧ ಭಾಗಗಳಾಗಿ ತುಂಡು ತುಂಡು ಮಾಡಿದರು. ಪ್ರತಿಯೊಂದು ತುಂಡಿನ ಆಡಳಿತವನ್ನು ಭಿನ್ನ ಭಿನ್ನ ರೀತಿಯಲ್ಲಿ ನಿರ್ವಹಿಸಿದರು. ಮೈಸೂರು ಸಂಸ್ಥಾನದ ಆಡಳಿತವನ್ನು ಅವು ನಿರ್ವಹಿಸಿದ ರೀತಿಯು ಹೈದರಾಬಾದ್ ನಿಜಾಮನ ಸಂಸ್ಥಾನವನ್ನು ನಿರ್ವಹಿಸಿದ ರೀತಿಗಿಂತ ಭಿನ್ನವಾಗಿತ್ತು. ಕೊಡಗಿನ ಬಗ್ಗೆ, ಕರಾವಳಿಯ ಬಗ್ಗೆ, ಬೆಳಗಾವಿ ವಿಭಾಗದ ಜಿಲ್ಲೆಗಳ

ನಿರ್ವಹಣೆಯ ಪರಿಯೂ ಭಿನ್ನವಾಗಿದ್ದವು. ಸುರೇಂದ್ರ ರಾವ್ ವಾದಿಸುವಂತೆ ಸ್ವಾತಂತ್ರ್ಯಪೂರ್ವದ ಪ್ರಾದೇಶಿಕ ಅಸಮಾನತೆಯೇ ಏಕೀಕರಣದ ಅವಶ್ಯಕತೆಯನ್ನು ಮತ್ತು ಅದರ ತುರ್ತನ್ನು ನಿರ್ಧರಿಸಿತು. ಅವರ ಈ ಮಾತುಗಳು ಸಮಸ್ಯೆಯ ಬಗ್ಗೆ ವಿಶಿಷ್ಟ ಬೆಳಕನ್ನು ಚೆಲ್ಲುತ್ತದೆ. ಅವರು ಹೇಳುತ್ತಾರೆ "ನಾವು ಒಂದು ಎಂದು ತಿಳಿಯುವ ಜಗತ್ತು ಒಂದಾಗಿರುವುದಿಲ್ಲ. ಏಕತೆಯು ಸಂಪೂರ್ಣ ಸತ್ಯವಲ್ಲ. ಭಿನ್ನತೆಯೂ ಸಂಪೂರ್ಣ ಸತ್ಯವಾಗಲು ಅಸಾಧ್ಯ. ಅವುಗಳ ಅಸ್ತಿತ್ವವು ಸಾಪೇಕ್ಷವಾದುದು".

೯. ಇದಕ್ಕೆ ಸ್ವಾತಂತ್ರ್ಯಾನಂತರದ ಸರ್ಕಾರಗಳ ಮಲತಾಯಿ ಧೋರಣೆ ಕಾರಣ ಅನ್ನುವುದು ಪೂರ್ಣ ಸತ್ಯವಲ್ಲ. ಈ ಸಮಸ್ಯೆಯ ಮೂಲದಲ್ಲಿ ಅನೇಕ ಆರ್ಥಿಕ, ಸಾಮಾಜಿಕ ಹಾಗೂ ಚಾರಿತ್ರಿಕ ಸಂಗತಿಗಳಿವೆ. ಅವುಗಳನ್ನು ಅರ್ಥ ಮಾಡಿಕೊಳ್ಳಬೇಕು. ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಹಿಂದುಳಿದಿರುವಿಕೆಯನ್ನು ಕೋಮುಸಂಬಂಧದ ನೆಲೆಯಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸುವುದು ಸರಿಯಲ್ಲ. ಈ ಜಿಲ್ಲೆಗಳಷ್ಟೇ ಅಥವಾ ಇದಕ್ಕಿಂತಲೂ ಹೆಚ್ಚು ಹಿಂದುಳಿದ ಜಿಲ್ಲೆಗಳು ನಮ್ಮಲ್ಲಿವೆ. ಮೈಸೂರು ಸಂಸ್ಥಾನವು ೨೦ನೆಯ ಶತಮಾನದಲ್ಲಿ ಮಾದರಿ ರಾಜ್ಯ ಅನ್ನಿಸಿಕೊಳ್ಳಲು ೧೮ನೆಯ ಶತಮಾನದಲ್ಲಿ ಟಿಪ್ಪೂ ಆಡಳಿತದ ಕಾಣಿಕೆಯಿದೆ.

ಭಾಗ ೪

ಸಮಸ್ಯೆಯ ಪರಿಹಾರಕ್ಕೆ ದಾರಿ ಯಾವುದು?

ಸಮಸ್ಯೆಯು ಸಂಕೀರ್ಣವಾಗಿದೆ. ಅದು ಏಕರೂಪದಿಂದಲೂ ಕೂಡಿಲ್ಲ. ಬಹುವಚನವು ಅದರ ವಿಶಿಷ್ಟ ಲಕ್ಷಣವಾಗಿದೆ. ಆದ್ದರಿಂದ ಅದರ ಪರಿಹಾರವೂ ಬಹುವಚನದಿಂದಿರಬೇಕು ಏಕರೂಪಿ ಅಭಿವೃದ್ಧಿ ಮಾದರಿಯು ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿದೆ. ಪ್ರದೇಶ ನಿರ್ದಿಷ್ಟ ಅಭಿವೃದ್ಧಿ ಯೋಜನೆಗಳ ಅಗತ್ಯವಿದೆ. ಆದರೆ ನಾವು ರೂಪಿಸುತ್ತಿರುವ ಅಭಿವೃದ್ಧಿ ಯೋಜನೆಗಳಿಗೆ ಪ್ರದೇಶ ವಿಶಿಷ್ಟತೆಯ ನೆಲೆಯಿಲ್ಲ. ಇಂದು ಅಖಂಡತೆಯ ಬಗ್ಗೆ ರಾಷ್ಟ್ರಮಟ್ಟದಲ್ಲಿ ಮಾತುಗಳು ಕೇಳಿಬರುತ್ತಿವೆ. 'ಸಣ್ಣದು ಸುಂದರ' ಎಂದು ಈ. ಎಫ್. ಶುಮಾಕರ್ ಹೇಳಿದರೆ ನಾವು 'ಬಿಗ್ ಈಸ್ ಬೆಟರ್' ಅನ್ನುತ್ತಿದ್ದೇವೆ. ನಮಗೆ ದೊಡ್ಡ ಬ್ಯಾಂಕು ಬೇಕು. ದೊಡ್ಡ ಅಣೆಕಟ್ಟೆ ಬೇಕು. ದೊಡ್ಡ ಮಾರುಕಟ್ಟೆ ಬೇಕು. ಇಡೀ ದೇಶಕ್ಕೆ ಒಂದು ತೆರಿಗೆ ಬೇಕು. ಎಲ್ಲರ ಅಭಿವೃದ್ಧಿಯಲ್ಲಿ ಬಡವರ ಅಭಿವೃದ್ಧಿಯೂ ನಡೆಯುತ್ತದೆ ಅನ್ನುವ 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ನೀತಿಯು ಪ್ರತಿಷ್ಠಿತ ವರ್ಗಗಳ, ಸಮೃದ್ಧ ಪ್ರದೇಶಗಳ ಹಿತಾಸಕ್ತಿಗಳನ್ನು ಮಾತ್ರ ಗುರಿಯಾಗಿಟ್ಟುಕೊಂಡಿದೆ. ಎಲ್ಲರ ಅಭಿವೃದ್ಧಿಯಲ್ಲಿ, ಇಡೀ ರಾಜ್ಯದ ಅಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯೂ ಸಾಧ್ಯ ಅನ್ನುವುದು ತಪ್ಪು.

ನಮ್ಮ ರಾಜ್ಯ ಎದುರಿಸುತ್ತಿರುವ ಪ್ರಾದೇಶಿಕ ಅಸಮಾನತೆಗೆ ಕ್ರಮಗಳು ಪಂಚಾಯತ್ ರಾಜ್ ಸಂಸ್ಥೆಗಳ ಮಟ್ಟದಲ್ಲಿ ಆರಂಭವಾಗಬೇಕು. ಅಸಮಾನತೆಯ ಸಮಾಜದಲ್ಲಿ ಸಮಾನತೆಯನ್ನು ಅಭಿವೃದ್ಧಿ ನೀತಿಗಳು ಆಧಾರ ಮಾಡಿಕೊಂಡರೆ ಅಲ್ಲಿ ಅಸಮಾನತೆ ಉಲ್ಬಣಗೊಳ್ಳುತ್ತದೆ ವಿನಾ ಅದು ಕಡಿಮೆಯಾಗುವುದಿಲ್ಲ. ಈ ನೆಲೆಯಲ್ಲಿ ನಮ್ಮ ರಾಜ್ಯದ ಪ್ರಾದೇಶಿಕ ಅಸಮಾನತೆ ನಿರ್ವಹಣೆಯ ಬಗ್ಗೆ ಯೋಚಿಸಬೇಕು.*

ಕನ್ನಡ ಶಾಲೆ ಸವಾಲುಗಳು ಮತ್ತು ಅವಕಾಶಗಳು

–ಡಾ.ಎಂ.ಸಿ.ಮನೋಹರ

ಮೈಸೂರಿನ ಅರಿವು ಕನ್ನಡ ಶಾಲೆ ಪ್ರಾರಂಭವಾಗಿ ಇಂದಿಗೆ ೯ ವರ್ಷ. ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿರುವ ಸಂದರ್ಭದಲ್ಲಿ ಪ್ರಾರಂಭವಾದ ಈ ಶಾಲೆ ಯಶಸ್ವಿಯಾಗಿ ನಡೆಯುತ್ತಿದೆ.ಅರಿವು ಶಾಲೆ ನಡೆದು ಬಂದ ದಾರಿಯನ್ನುಅದರ ವ್ಯವಸ್ಥಾಪಕ ಧರ್ಮದರ್ಶಿ ಇಲ್ಲಿ ವಿವರಿಸಿದ್ದಾರೆ.

ಅರಿವು ಶಾಲೆ ಶುರುವಾದ ಬಗೆ: ಅದು ೨೦೦೮ನೇ ಇಸವಿಯ ಜನವರಿ ತಿಂಗಳು. ಅಮೀರ್‌ಖಾನ್ ಅಭಿನಯದ ಹಿಂದಿ ಚಿತ್ರ "ತಾರೆ ಜಮೀನ್ ಪರ್" ಬಿಡುಗಡೆಯಾಗಿತ್ತು. ಆ ಚಿತ್ರ ವೀಕ್ಷಿಸಿ, ಇಂದಿನ ಶಿಕ್ಷಣ ವ್ಯವಸ್ಥೆಯಿಂದ ಆಗುತ್ತಿರುವ ಅನಾಹುತಗಳು, ಬದಲಾಗಬೇಕಾದ ಅನಿವಾರ್ಯತೆಯ ಬಗ್ಗೆ, ನಮ್ಮ ಸ್ನೇಹಿತರ ವಲಯದಲ್ಲಿ ಬಿಸಿಬಿಸಿ ಚರ್ಚೆ ನಡೆದಿತ್ತು. ಆ ರೀತಿಯ ಶಾಲೆ ಮೈಸೂರಿನಲ್ಲೂ ಇದ್ದಿದ್ದರೆ ಚೆನ್ನಾಗಿತ್ತಲ್ವ ಎಂದು ನಮಗನಿಸಿತ್ತು. ಹೀಗೇ ಚರ್ಚೆ ಮುಂದುವರಿದು, ನಾವು ಶಿಕ್ಷಣ ಇಲಾಖೆ ಮತ್ತು ವ್ಯವಸ್ಥೆಯನ್ನು ಟೀಕಿಸುತ್ತಿದ್ದೇವೆ. ಇದರಿಂದ ಕಾಲಹರಣವಲ್ಲದೆ, ಬೇರೇನೂ ಪ್ರಯೋಜನವಿಲ್ಲ. ಈ ರೀತಿ ಟೀಕಿಸುವ ಬದಲು ಸಣ್ಣದಾಗಿ ನಾವೇ ಒಂದು ಶಾಲೆ ಪ್ರಾರಂಭಿಸಿದರೆ ಹೇಗೆ? ಎನ್ನುವ ಪ್ರಸ್ತಾಪವನ್ನು ಗುಂಪಿನಲ್ಲೊಬ್ಬರು ಮಂಡಿಸಿದರು. ಹೀಗೆ ನಮ್ಮ ಶಾಲೆ "ಅರಿವು" ನ ಯೋಚನೆ ಶುರುವಾಯಿತು. ಸಾಕಷ್ಟು ಚರ್ಚೆ, ತಜ್ಞರೊಡದೆ ಸಂವಾದದ ನಂತರ ಒಂದು ವಿಚಾರದಲ್ಲಿ ನಮ್ಮ ಗುಂಪಿನಲ್ಲಿ ಒಮ್ಮತ ಮೂಡಿತು. ಅದೇನೆಂದರೆ, ಮಕ್ಕಳಿಗೆ ಅರ್ಥಪೂರ್ಣವಾಗಿ, ಸಂತಸದಿಂದ ಶಿಕ್ಷಣ ನೀಡಲು ಮಾತೃಭಾಷೆ(ಪರಿಸರದ ಭಾಷೆ) ಯಿಂದ ಮಾತ್ರ ಸಾಧ್ಯ. ಹಾಗಾಗಿ ಕನ್ನಡ ಮಾದ್ಯಮದಲ್ಲೇ, ಸರಕಾರದ ಅನುಮತಿ ಪಡೆದು, ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಲು ನಿರ್ಣಯಿಸಿದೆವು. ಇದಕ್ಕೆ ಪೂರಕವಾಗಿ, ಈಗಾಗಲೇ ಕನ್ನಡ ಮಾದ್ಯಮದಲ್ಲಿ ಶಾಲೆಯನ್ನು ಯಶಸ್ವಿಯಾಗಿ ನಡೆಸುತ್ತಿರುವ ಧಾರವಾಡದ "ಬಾಲ ಬಳಗ", ಶಿರಸಿಯ "ಚಂದನ", ಸುಳ್ಯದ "ಸ್ನೇಹ" ಶಾಲೆಗಳಿಗೆ ಭೇಟಿ ನೀಡಿದೆವು. ಅಲ್ಲಿಯ ಆಡಳಿತ ಮಂಡಳಿ, ಶಿಕ್ಷಕರು, ಪೋಷಕರ ಜೊತೆ ಸಂವಾದವನ್ನೂ ನಡೆಸಿ ಅವರ ಸಲಹೆಗಳನ್ನೂ ಪಡೆದೆವು. ಈ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ, "ಜನಪದ ಸೇವಾ ಟ್ರಸ್ಟ್"ನ ಸಂತೋಷ ಕೌಲಗಿಯುವರ ಸಹಾಯ ಮತ್ತು ಮಾರ್ಗದರ್ಶನವಿತ್ತು. ಈ ಎಲ್ಲಾ ಸಿದ್ದತೆಗಳ ನಂತರ ೨೦೦೮ ನೇ ಇಸವಿ ಜೂನ್‌ನಲ್ಲಿ, ಸ್ನೇಹಿತರಾದ ಕೆ.ರಾಘವೇಂದ್ರರವರ ಮೈಸೂರಿನ ಪಕ್ಷಿಧಾಮ ಲಿಂಗಾಂಬುಧಿ ಕೆರೆಯ ಪಕ್ಕದಲ್ಲೇ ಇದ್ದ ೩ ಎಕರೆ ಸಾವಯವ ತೋಟದ ಮನೆಯಲ್ಲಿ, ೬ ಮಕ್ಕಳಿಂದ ಶಾಲೆ ಪ್ರಾರಂಭಿಸಿದೆವು. ಅದರಲ್ಲಿ ಆಡಳಿತ ಮಂಡಳಿಯ ಸದಸ್ಯರ ಮಕ್ಕಳೇ ಇಬ್ಬರಿದ್ದರು.

ಎದುರಾದ ಸವಾಲುಗಳು:

ಪೋಷಕರು: ಆ ಕಾಲದಲ್ಲಾಗಲೇ ಪೋಷಕರು ಸರ್ಕಾರಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದನ್ನು ನಿಲ್ಲಿಸಿ, ಖಾಸಗಿ ಇಂಗ್ಲಿಷ್ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುತ್ತಿದ್ದರು. ಅವರಿಗೆ ಕನ್ನಡ ಶಾಲೆಗಳಲ್ಲಿ ಮಕ್ಕಳು ಕಲಿತರೆ, ಉತ್ತಮ ಭವಿಷ್ಯಕ್ಕೆ

ತೊಡಕಾಗಬಹುದೆಂಬ ಆತಂಕವಿತ್ತು. ಅದಕ್ಕೆ ಬಹುಪಾಲು ಸರ್ಕಾರಿ ಮತ್ತು ಖಾಸಗಿ ಕನ್ನಡ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳು, ಶಿಕ್ಷಕರ ಧೋರಣೆಗಳು ಕಾರಣವಾಗಿದ್ದವು. ಹಾಗಾಗಿ ಪೋಷಕರಿಗೆ ನಮ್ಮ ಶಾಲೆಯಲ್ಲಿ, ಮಕ್ಕಳಿಗೆ ಅವರ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗುವಂತಹ ಶೈಕ್ಷಣಿಕ ವಾತಾವರಣ, ಆಟೋಪಕರಣಗಳ ಬಗ್ಗೆ ಮಾಹಿತಿ ನೀಡಿದೆವು. ವಿಧಿಸುವ ಶುಲ್ಕದ ಬಗ್ಗೆಯೂ ಪಾರದರ್ಶಕವಾಗಿ ವಿವರಣೆಯನ್ನು ನೀಡುತ್ತಿದ್ದೆವು. ಶೈಕ್ಷಣಿಕ ಯೋಜನೆ, ಶುಲ್ಕ ನಿಗದಿ ಮತ್ತು ಶಾಲೆಯ ಬೆಳವಣಿಗೆಯ ಚರ್ಚೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಪೋಷಕರು ಪಾಲ್ಗೊಳ್ಳುವಂತೆ ಮಾಡಿದೆವು. ಶಿಕ್ಷಣ ತಜ್ಞರೊಂದಿಗೆ ಸಂವಾದಗಳನ್ನೂ ಏರ್ಪಡಿಸುತ್ತಿದ್ದೆವು. ಶಾಲೆಯ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ(ಶಿಕ್ಷಕರ ನೇಮಕ, ಸ್ವಂತ ಜಾಗ ಖರೀದಿ, ಪ್ರೌಢಶಾಲೆಯ ಪ್ರಾರಂಭ) ಪೋಷಕರ ಅಭಿಪ್ರಾಯ, ಸಲಹೆ ಮತ್ತು ಸಹಾಯಗಳನ್ನು ಪಡೆದುಕೊಳ್ಳುತಿದ್ದೆವು. ಇದರಿಂದ ಪೋಷಕರಿಗೆ ನಮ್ಮ ಶಾಲೆಯ ಬಗ್ಗೆ ನಂಬಿಕೆ, ಹೆಮ್ಮೆ ಮೂಡುವಂತಾಯಿತು. ಹೀಗಾಗಿ ಯಾವುದೇ ಜಾಹಿರಾತನ್ನು ನೀಡದೆಯೂ, ಕಳೆದ ವರ್ಷ ನಮ್ಮ ಶಾಲೆಯ ೧ ನೇ ತರಗತಿಗೆ ೨೫ ಮಕ್ಕಳನ್ನು ದಾಖಲಿಸಿದ್ದಾರೆ. ಇನ್ನೂ ಹೆಚ್ಚಿನ ಮಕ್ಕಳು ಅರ್ಜಿ ಹಾಕಿದ್ದರೂ, ಮಕ್ಕಳ ವೈಯುಕ್ತಿಕ ಬೆಳವಣಿಗೆಯ ಬಗ್ಗೆ ಗಮನವರಿಸಲು ಸಾಧ್ಯವಾಗದ ಕಾರಣ, ಪ್ರತೀ ತರಗತಿಯ ಮಕ್ಕಳ ಸಂಖ್ಯೆಯನ್ನು ೨೫ ಕ್ಕೇ ಸೀಮಿತಗೊಳಿಸಿದ್ದೇವೆ. ಹಿಂದಿನ ಪೂರ್ವಪ್ರಾಥಮಿಕ ತರಗತಿಯಲ್ಲಿ, ಈಗಾಗಲೇ ಮಕ್ಕಳು ಸಂಖ್ಯೆಯಿರುವುದರಿಂದ ಮುಂದಿನ ವರ್ಷದ ಒಂದನೇ ತರಗತಿಗೆ ಹೊಸ ಪ್ರವೇಶಾತಿ ಲಭ್ಯವಿಲ್ಲ. ಆದರೂ ಈಗಾಗಲೇ ೫ ಅರ್ಜಿಗಳು ಮುಂದಿನ ವರ್ಷದ ಪ್ರವೇಶ ಕೋರಿ ಬಂದಿವೆ. ಅವರಿಗೆ ಈಗಿರುವ ಮಕ್ಕಳು ಯಾರಾದರೂ ಬಿಟ್ಟರೆ, ಆದ್ಯತೆಯ ಮೇಲೆ ಪ್ರವೇಶ ನೀಡುತ್ತೇವೆಂದು ತಿಳಿಸಲಾಗಿದೆ.

ಶಿಕ್ಷಕರು:

ಸರ್ಕಾರಿ ಶಾಲೆಗಳಲ್ಲಿ ನೇಮಕಗೊಳ್ಳುವ ಶಿಕ್ಷಕರಿಗೆ ಶೈಕ್ಷಣಿಕ ಅರ್ಹತೆ ಮತ್ತು ಸಾಮರ್ಥ್ಯಗಳಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಆದರೂ ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಕುಸಿದಿದೆ. ಹಾಗಾಗಿ ಶೈಕ್ಷಣಿಕ ಅರ್ಹತೆ, ಸಾಮರ್ಥ್ಯವಿರುವ ಜೊತೆಗೆ ಮಕ್ಕಳ ಕಲಿಕೆಯ ಬಗ್ಗೆ ದೂರದೃಷ್ಟಿಯ ಮನೋಭಾವವಿರುವ ಶಿಕ್ಷಕರನ್ನು ಶಾಲೆಗಾಗಿ ಆಯ್ಕೆಮಾಡುವುದು ನಮಗೊಂದು ಸವಾಲಾಗಿತ್ತು. ಆರಂಭದಲ್ಲಿ, ಅದಕ್ಕಾಗಿ ಪತ್ರಿಕೆಗಳಲ್ಲಿ ಜಾಹಿರಾತು ನೀಡಿದರೂ, ಸೂಕ್ತ ಅಭ್ಯರ್ಥಿಗಳು ಸಿಕ್ಕಿದ್ದು ಕಡಿಮೆ. ಮಕ್ಕಳಿಗೆ, ಶಿಕ್ಷಕರಿಗಿಂತ ಹೆಚ್ಚಾಗಿ ಮಾರ್ಗದರ್ಶಕರಾಗಿ, ವಿಷಯಗಳಲ್ಲಿ ಆಸಕ್ತಿ ಮೂಡುವಂತೆ ಪಾಠ ಮಾಡುವ ಶಿಕ್ಷಕರು ಸಿಕ್ಕಿದ್ದು ನಮ್ಮ ಸ್ನೇಹಿತರು, ಪೋಷಕರು, ಶಾಲೆಯ ಶಿಕ್ಷಕರು ಮತ್ತು ಹಿತೈಷಿಗಳ ನೆರವಿನಿಂದ. ಅವರು ಬಯಸಿದಾಗ ಮಾರ್ಗದರ್ಶನ ನೀಡುವ ಶಿಕ್ಷಣ ತಜ್ಞರ ಗುಂಪೇ ನಮ್ಮ ಬೆನ್ನ ಹಿಂದಿದೆ.

ದಾನಿಗಳು:

ಆರಂಭದ ೩-೪ ವರ್ಷ, ಶಾಲಾ ಸಿಬ್ಬಂದಿ ಮತ್ತು ನಿತ್ಯದ ವೆಚ್ಚದ ಕೊರತೆಯನ್ನು, ಆಡಳಿತ ಮಂಡಳಿ ಭರಿಸಿದರೂ, ನಂತರದ ದಿನಗಳಲ್ಲಿ ಶಾಲೆ, ಸ್ವಾವಲಂಬನೆ ಸಾಧಿಸಿದೆ. ಆದರೂ ಕಟ್ಟಡ ನಿರ್ಮಾಣ ಮತ್ತು ಇತರೆ ಮೂಲಭೂತ ಸೌಲಭ್ಯ ನಿರ್ಮಾಣಕ್ಕೆ ಶಾಲೆ ಇಂದಿಗೂ ಸಾರ್ವಜನಿಕರು ಮತ್ತು ಹಿತೈಷಿಗಳ ದೇಣಿಗೆಯನ್ನೇ ನೆಚ್ಚಿಕೊಂಡಿದೆ.

ಇದುವರೆಗೂ ಯಾವುದೇ ಕಾರ್ಪೋರೇಟ್ ಸಂಸ್ಥೆಯ ನೆರವಿಲ್ಲದೆಯೇ, ವೈಯುಕ್ತಿಕವಾಗಿ ದೇಣಿಗೆ ನೀಡುವ ದಾನಿಗಳಿಂದಲೇ ಶಾಲೆ ನಿರ್ಮಾಣಗೊಂಡಿದೆ. (೨೫,೦೦೦ ಚದರಡಿ ಜಾಗದಲ್ಲಿ ನಿಮಾಣವಾಗಿರುವ ಸುಮಾರು ೫,೦೦೦ ಚದರಡಿ ಕಟ್ಟಡ). ಇಂದಿಗೂ ಶಾಲೆಯ ಮೇಲೆ ಸುಮಾರು ೪೦ ಲಕ್ಷದಷ್ಟು ಬಡ್ಡಿರಹಿತ ಸಾಲವಿದೆ. ಆದರೂ ನಮಗೆ ಸಹಾಯ ಮಾಡಿರುವವರಲ್ಲಿ, ಅತಿಶ್ರೀಮಂತರಿಗಿಂತ, ಮಧ್ಯಮ ವರ್ಗ ಮತ್ತು ಅದಕ್ಕಿಂತಲೂ ಆರ್ಥಿಕವಾಗಿ ಕೆಳಗಿರುವವರುವವರ ಸಂಖ್ಯೆಯೇ ಹೆಚ್ಚು. ನಮ್ಮ ಯೋಚನೆ ಮತ್ತು ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಂಡರೆ ಜನ ನಂಬಿ, ಕನ್ನಡ ಶಾಲೆಯ ಅಭಿವೃದ್ದಿಗೆ ಹಣ ನೀಡುತ್ತಾರೆಂಬುದಕ್ಕೆ ನಮಗೆ ಸಿಕ್ಕಿರುವ ಸಹಾಯವೇ ಸಾಕ್ಷಿ.

ಸಾರ್ವಜನಿಕ ಶಿಕ್ಷಣ ಇಲಾಖೆ: ಮೊದಲಿನಿಂದಲೂ ಶಿಕ್ಷಣ ಇಲಾಖೆಯ ಅನುಮತಿ ಮತ್ತು ಮಾನ್ಯತೆಯಿಂದಲೇ ಶಾಲೆ ನಡೆಸಬೇಕೆನ್ನುವುದು ನಮ್ಮ ನಿಲುವಾಗಿತ್ತು. ಮುಖ್ಯವಾಹಿನಿಯಿಂದ ದೂರವಾಗಿ, ಅನೌಪಚಾರಿಕವಾಗಿ ಶಾಲೆ ನಡೆಸಬಾರದೆನ್ನುವುದು ನಮ್ಮ ನಿಲುವಾಗಿತ್ತು. ಶಿಕ್ಷಣ ಇಲಾಖೆಯಿಂದ ಔಪಚಾರಿಕವಾಗಿ ಅನುಮತಿ ಪಡೆದು, ನಿಯುಮಾನುಸಾರವೇ ರಾಜ್ಯ ಶಿಕ್ಷಣ ಇಲಾಖೆಯ ಪಠ್ಯವನ್ನು ಶಾಲೆಯಲ್ಲಿ ಅನೌಪಚಾರಿಕವಾಗಿ ಕಲಿಸುವ ವಾತಾವರಣವಿರಬೇಕೆನ್ನುವುದೇ ನಮ್ಮ ಅನಿಸಿಕೆ. ಅದಕ್ಕೆ ಬದ್ದರಾಗಿ, ನಿಯಮಾನುಸಾರವೇ ಶಾಲೆ ನಡೆಸುತ್ತಿದ್ದೇವೆ. ಆದರೂ ಶಾಲೆಯ ವಿವಿಧ ಹಂತಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ವೇಳೆ, ಅನಗತ್ಯವಾಗಿ ಇಲಾಖೆಯಿಂದ ಕಿರಿಕಿರಿ ಅನುಭವಿಸುತ್ತೇವೆ. ತರಗತಿಗಳಿಗೆ ಅನುಮತಿ, ಮಾನ್ಯತೆ ನೀಡುವ ಮತ್ತು ಅದನ್ನು ನವೀಕರಣ ಮಾಡುವ ಪ್ರಕ್ರಿಯೆಯಲ್ಲಿ ವಿಳಂಬಗತಿ ಅನುಸರಿಸುವುದು, ಕೇಳಿದ ದಾಖಲೆಯನ್ನೇ ಪದೇಪದೇ ಕೇಳುವುದು ಮುಂತಾದ ಸಂಗತಿಗಳು ಇಲ್ಲಿ ವಿಶೇಷವೇ ಅಲ್ಲ. ಇಲಾಖೆಯ ಸಿಬ್ಬಂದಿಯಿಂದ ಅಗೌರವ, ಅವಮಾನಕ್ಕೆ ಒಳಗಾಗುವುದಕ್ಕೆ ಸಿದ್ದರಾಗೇ ಕನ್ನಡ ಶಾಲೆ ನಡೆಸಬೇಕಾಗಿದೆ. ನಮ್ಮ ಶಾಲೆಯ ಬಗ್ಗೆ ಪತ್ರಿಕೆಗಳಲ್ಲಿ ಬರುವ ಲೇಖನಗಳಿಂದ, ಈಗೀಗ ಪರಿಸ್ಥಿತಿ ಸುಧಾರಿಸುತ್ತಿದೆ. ಇದಕ್ಕೆ ಅಪವಾದವಾಗಿ, ಅನೇಕ ಹಿರಿಯ ಅಧಿಕಾರಿಗಳಿದ್ದಾರೆ. ಸಾಕಷ್ಟು ಬಾರಿ ಸಹಾಯವನ್ನೂ ಮಾಡಿದ್ದಾರೆ!(ಅವರು ಮಾಡಬೇಕಾದ ಕರ್ತವ್ಯವನ್ನು ಮಾಡಿದಾಗ, ಸಹಾಯವನ್ನಾಗಿ ಪರಿಗಣಿಸುವ ಪರಿಸ್ಥಿತಿ ಇದೆ) ಈ ಸಮಸ್ಯೆಗೆ ನಾವು ಕಂಡುಕೊಂಡಿರುವ ಪರಿಹಾರವೆಂದರೆ ನಮ್ಮ ಪಾರದರ್ಶಕತೆಯ ನಿಲುವು. ನಮ್ಮ ಸಂಸ್ಥೆಯ ಆಡಿಟ್ ವರದಿಯನ್ನು, ನಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತೇವೆ. ಈ ಕಾರಣಕ್ಕಾಗಿ ನಾವು ಯಾವುದೇ ವಿಶೇಷ ವೆಚ್ಚವನ್ನು(ರಶೀತಿ ನೀಡಲಾಗದ) ನೀಡಲಾಗುವುದಿಲ್ಲವೆಂದು ಅಧಿಕಾರಿಗಳಿಗೆ ಸ್ಪಷ್ಟಪಡಿಸುತ್ತೇವೆ.

ಇದರಿಂದ ನಮಗೆ ಅನುಮತಿ ನೀಡುವ ಪ್ರಕ್ರಿಯೆ ವಿಳಂಬವಾದರೂ, ಅಂತಿಮವಾಗಿ ಅನುಮತಿ ಸಿಗುತ್ತದೆ. ವಿಳಂಬಗತಿ ಮತ್ತು ಅನೇಕ ಬಾರಿ ಇಲಾಖೆಯ ಕಚೇರಿಗೆ ಎಡತಾಕುವುದನ್ನು ಒಪ್ಪಿಕೊಂಡಿರುವುದರಿಂದ ಅಂತ ಕೋಪ,ದುಃಖಗಳೇನೂ ಇತ್ತೀಚೆಗೆ ಆಗುತ್ತಿಲ್ಲ. ಇದು ನಮ್ಮ ವ್ಯಕ್ತಿತ್ವ ನಿರ್ಮಾಣಕ್ಕೆ, ಇಲಾಖೆಯ ಕೊಡುಗೆ ಎಂದು ಭಾವಿಸಿದ್ದೇವೆ.

ಇಂಗ್ಲಿಷ್ ಭೋದನೆ:

ನಮ್ಮ ಶಾಲೆಗೆ ದಾಖಲು ಮಾಡಬಯಸುವ ಬಹುಪಾಲು ಪೋಷಕರ ಪ್ರಶ್ನೆ, ಇಂಗ್ಲಿಷ್ ಭೋದನೆಯ ಬಗ್ಗೆಯಾಗಿರುತ್ತದೆ. ಕನ್ನಡ ಮಾಧ್ಯಮದ ಮಕ್ಕಳಿಗೆ ಇಂಗ್ಲಿಷನ್ನು

ಕಲಿಸುವುದು, ಒಂದು ಸವಾಲೇ. ಔಪಚಾರಿಕವಾಗಿ ಮೊದಲಿಗೆ, ಇಂಗ್ಲಿಷ್‌ನ್ನು ಅಕ್ಷರಗಳನ್ನು ಭೋಧಿಸುವುದರ ಮೂಲಕ, ಬರೆಸುವುದರ ಮೂಲಕ ಪ್ರಾರಂಭಿಸಲಾಗುತ್ತದೆ. ಆದರೆ ನಮ್ಮ ಶಾಲೆಯಲ್ಲಿ ಮೊದಲಿಗೆ ಇಂಗ್ಲಿಷ್ ಭಾಷೆಯನ್ನು ಸಿನಿಮಾಗಳು, ಹಾಡಿನ ಮುಖಾಂತರ ಪರಿಚಯಿಸಲಾಗುತ್ತದೆ. ಚೆನ್ನಾಗಿ ಇಂಗ್ಲಿಷ್ ಮಾತನಾಡಲು ಬರುವ ಶಿಕ್ಷಕರಿರುವುದರಿಂದ, ಅವರಿಂದ ಸರಳವಾಗಿ ಮಾತನಾಡಲು ಅಭ್ಯಾಸ ಮಾಡಿಸಲಾಗುತ್ತದೆ. ಕೊನೆಯಲ್ಲಿ ಅಕ್ಷರಗಳನ್ನು, ಪದಗಳನ್ನು, ವಾಕ್ಯಗಳನ್ನು ಓದಲು, ಬರೆಯಲು ಹೇಳಿಕೊಡಲಾಗುತ್ತದೆ. (ನಮ್ಮ ಗ್ರಂಥಾಲಯದಲ್ಲಿ, ಕಲಿಕೆಯ ವಿವಿಧ ಹಂತದವರು ಓದಬಹುದಾದು ಸುಮಾರು ೨,೦೦೦ ಪುಸ್ತಕಗಳಿವೆ.) ಇದರಿಂದ ಭಾಷೆಯ ಬಗೆಗಿನ ಭಯ ದೂರವಾಗಿ, ಮಕ್ಕಳು ಸ್ವಾಭಾವಿಕವಾಗಿ ಇಂಗ್ಲಿಷನ್ನು ಕಲಿಯುತ್ತಾರೆ. ಪೂರಕವಾದ ವಾತಾವರಣ ನಿರ್ಮಾಣ ಮಾಡಲು, ಹೊರದೇಶದ (ಚೆನ್ನಾಗಿ ಇಂಗ್ಲಿಷ್ ಮಾತನಾಡಲು ಬರುವ) ಇಬ್ಬರು ಸ್ವಯಂಸೇವಕರು ನಮ್ಮ ಶಾಲೆಯಲ್ಲಿ ಇದ್ದು, ಮಕ್ಕಳ ಜೊತೆ ಒಡನಾಡುವ ವ್ಯವಸ್ಥೆ ಮಾಡಲಾಗಿದೆ. ೯ ನೇ ತರಗತಿಯಿಂದ ಪೂರ್ಣವಾಗಿ ಇಂಗ್ಲಿಷ್ ಮಾಧ್ಯಮದಲ್ಲೇ ವಿಷಯಗಳನ್ನು ಕಲಿಯುವುದರಿಂದ, ಅವರ ಉನ್ನತ ವ್ಯಾಸಂಗಕ್ಕೆ ಅನುಕೂಲವಾಗಲಿದೆ.

ಹೀಗೆ ನಮಗೆದುರಾಗಿರುವ ಸವಾಲುಗಳು ಮತ್ತು ಅದನ್ನು ಪರಿಹರಿಸಲು ನಾವು ಕೈಗೊಂಡಿರುವ ಕ್ರಮಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದೇನೆ. ನಮ್ಮ ಹತ್ತು ವರ್ಷಗಳ ಅನುಭವದಲ್ಲಿ ಕಂಡುಕೊಂಡಿರುವ ಸತ್ಯವೆಂದರೆ, ಕನ್ನಡ ಮಾಧ್ಯಮದ ಶಿಕ್ಷಣ ನೀಡಲು ಪೋಷಕರಿಗೆ ಆಸಕ್ತಿ, ಒಲವು ಇದೆ. ಆದರೆ ಅವರಿಗೆ ನಂಬಿಕೆ ಬರಿಸುವ ಹಾಗೆ, ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗುವಂತೆ ಕಲಿಕಾ ವಾತಾವರಣ ನಿರ್ಮಿಸಬೇಕು. ಆಗ ಅವರು ನ್ಯಾಯಯುತ ಶುಲ್ಕಭರಿಸಿ ತಮ್ಮ ಮಕ್ಕಳನ್ನು ಕನ್ನಡ ಮಾದ್ಯಮ ಶಾಲೆಗೆ ದಾಖಲಿಸುತ್ತಾರೆ. ಇದಕ್ಕೆ ನಮ್ಮ ಶಾಲೆಗೆ ದಾಖಲಿಸಿರುವ ೧೫೮ ಮಕ್ಕಳ ಪೋಷಕರೇ ಸಾಕ್ಷಿ.

ಶಾಲೆಯಲ್ಲಿರುವ ಇತರೆ ಪೂರಕ ವ್ಯವಸ್ಥೆಗಳು:

ಅ) ಭಯರಹಿತ, ಮುಕ್ತ ವಾತಾವರಣ

ಆ) ದೇಸೀ ಕ್ರೀಡೆಗಳಿಗೆ ಉತ್ತೇಜನ. ಪ್ರತಿ ವರ್ಷ, ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ, ಈಜು ಕಲಿಕಾ ಶಿಬಿರದ ಆಯೋಜನೆ

ಇ) ೫ ನೇ ತರಗತಿಯಿಂದ ವಿಷಯಾಧಾರಿತ ಕೊಠಡಿಗಳಲ್ಲಿ ಭೋದನೆ

ಈ) ಶಾಸ್ತ್ರೀಯ ಸಂಗೀತ, ನೃತ್ಯ, ತಬಲ, ಗಿಟಾರ್, ಹಾರ್ಮೋನಿಯಂ ತರಗತಿಗಳು

ಉ) ನಾಟಕ ತರಗತಿಗಳು

ಊ)ಶಾಲಾವರಣದಲ್ಲಿರುವು ಚಿಟ್ಟೆ ಉದ್ಯಾನವನ

ಋ)೬೦,೦೦೦ ಲೀಟರ್ ಸಾಮರ್ಥ್ಯದ ಮಳೆ ನೀರು ಸಂಗ್ರಹಣಾ ಸಂಪು

ಎ) ೩,೦೦೦ ಪುಸ್ತಕಗಳಿರುವ ೧,೦೦೦ ಚದರಡಿಯ ಗ್ರಂಥಾಲಯ ಮತ್ತು ಸಂಪನ್ಮೂಲ ಕೇಂದ್ರ

ಏ) ಶಾಲೆಯಲ್ಲಿರುವ ಪರಿಸರ ಸಂಪನ್ಮೂಲ ಕೇಂದ್ರದ ವತಿಯಿಂದ ನಿಯಮಿತವಾಗಿ ಗಿಡ, ಮರ,ಪ್ರಾಣಿ,ಪಕ್ಷಿ,ಹಾವು, ಜೇಡ, ಚಿಟ್ಟೆಗಳ ಬಗ್ಗೆ ತಿಳಿಸಿಕೊಡುವ ಕಾರ್ಯಾಗಾರಗಳ ಆಯೋಜನೆ

ಐ) ಸಮವಸ್ತ್ರವಾಗಿ ಪ್ರತಿದಿನ ಯಾವುದೇ ಬಣ್ಣದ ಖಾದಿ ಬಟ್ಟೆ

ಒ) ನಾಡಿನ ಇತಿಹಾಸ ಮತ್ತು ಸೊಬಗನ್ನು ತಿಳಿಸಿಕೊಡಲು ವಿವಿಧ ಸ್ಥಳಗಳಿಗೆ ಪ್ರವಾಸ (ಪೋಷಗರಿಗೂ ಸಹ) www.arivu.org

ಕನ್ನಡದ ನೆಲದ ಅವಾಸ್ತವಿಕ ಪರಿಸರದ ನೆಲೆಗಳು

– ಡಾ. ಟಿ.ಎಸ್. ಚನ್ನೇಶ್

ಪ್ರತೀ ವರ್ಷ ನವೆಂಬರ್ ತಿಂಗಳಿನಲ್ಲಿ ರಾಜ್ಯದ ಚಿಂತನೆಗೆ ಹೊಸ ಆಯಮಗಳ ಹುಡುಕಾಟ ನಡೆಯುತ್ತದೆ. ಮತ್ತೇ ಇದೀಗ ಅಂತಹದೆ ಹೊತ್ತು ದೀಪಾವಳಿಯ ಮುಗಿಯುತ್ತಲೇ ಎದುರಾಗಿದೆ. ಹೆಚ್ಚೂ ಕಡಿಮೆ ಕಳೆದ ಎರಡು ತಿಂಗಳಿಂದ ಇದ್ದಕ್ಕಿದ್ದಂತೆ ಮಳೆಯ ದಿನಗಳನ್ನು ರಾಜ್ಯ ಅನುಭವಿಸಿದ ಸಂದರ್ಭವನ್ನು ಇಟ್ಟುಕೊಂಡು ಪರಿಸರದ ವಾಸ್ತವತೆಯನ್ನು ಎದುರು ನೋಡಬೇಕಿದೆ. ಅದಕ್ಕೂ ಮೊದಲೆ ವಿವಿಧ ಭಾಗಗಳಲ್ಲಿ ಬೀಜವನ್ನು ಬಿತ್ತಲೂ ಹದಕ್ಕೇ ಕಾಯುತ್ತಿದ್ದ, ಬಿತ್ತಿದರೂ ಉತ್ತಮ ಬೆಳೆಯಾಗುವ ಲಕ್ಷಣವಿಲ್ಲದ, ಇನ್ನೇನು ಬರ ಅಂತೆಲ್ಲಾ ಎಂದುಕೊಂಡ ಎಷ್ಟೂ ಸುದ್ದಿಗಳು ನಮಗೆಲ್ಲಾ ಗೊತ್ತು. ಆದರೆ ಇದೀಗ ಮಳೆ ಬಂದರೂ, ಬೆಳೆಗಳ ಕೊಚ್ಚಿ ಹೋಗುವಂತಾಗಿ ನಷ್ಟದ ವಾಸ್ತವತೆ. ಹವಾಮಾನದ ವೈಪರೀತ್ಯದ ಪರಿಣಾಮಗಳ ಸಾಮಾನ್ಯ ಸಂದರ್ಭವನ್ನು ಬಹಳ ಸುಲಭವಾಗಿ ಎಲ್ಲರೂ ಅನುಭವಿಸುವಂತೆ ಆಗಿದೆ. ಹಾಗಿಲ್ಲದಿದ್ದಲ್ಲಿ ರಾಯಚೂರು, ಕೊಪ್ಪಳ, ಬಲ್ಳಾರಿ ಮುಂತಾದೆಡೆ ವಾರಗಟ್ಟಲೆ ಮಳೆಗಾಲದ ಅನುಭವವನ್ನು ಅದೂ ಅಕ್ಟೋಬರ್ ತಿಂಗಳಲ್ಲಿ ಕಂಡದ್ದಾದರೂ ಹೇಗೆ?

ತುಂಬಾ ಸರಳವಾಗಿ ಹವಾಮಾನ ವೈಪರೀತ್ಯ ಎಂಬ ಹಣೆಪಟ್ಟಿಕಟ್ಟಿ ಎಲ್ಲವೂ ನಮ್ಮ ಕೈಯಲ್ಲಿಲ್ಲ, ಎಂಬ ಮಾತು ಸುಲಭ. ಆದರೆ ಈ ವೈಪರೀತ್ಯಕ್ಕೆ ಕಾರಣವೇನು? ಎಂಬುದಕ್ಕೆ ಉತ್ತರಗಳನ್ನು ಕೊಡುವುದು ಹೇಗೇ? ಇದನ್ನು ಇಡೀ ಭೂಮಂಡಲಕ್ಕೆ ವ್ಯಾಪಿಸಿ ಮಾತಾಡುತ್ತಿದ್ದರೂ ರಾಜ್ಯದ ಪರಿಸ್ಥಿತಿಗೆ ಆಲೋಚಿಸಿ, ನಮ್ಮೊಳಗೇ ಒಂದಷ್ಟು ಹುಡುಕಾಟ ಮಾಡಬಹುದಾಗಿದೆ. ಪರಿಸರದ ಒಟ್ಟಾರೆ ಪರಿಣಾಮಗಳನ್ನು ಬರ, ಮಳೆ, ಬೆಳೆ ನಷ್ಟ, ಅಕಾಲಿಕ ರೋಗ ರುಜಿನಗಳು, ಕಂಡರಿಯದ ಮಾಲಿನ್ಯ, ಜೀವಿಸಂಕಷ್ಟದ ಅನುಭವಗಳು ಹೀಗೆ ಒಂದಲ್ಲೊಂದು ಬಗೆಯ ಬಗೆಯಲ್ಲಿ ಕಂಡಿದ್ದೇವೆ. ಒಂದು ಮಾತು ರೂಢಿಯಲ್ಲಿದೆ, ಏನೆಂದರೆ "ಮಗ ಉಂಡರೆ ಕೇಡಾ? ಮಳೆ ಬಂದರೆ ಕೇಡಾ?" ಮಳೆಯ ಆಗಮನವನ್ನು ಮಕ್ಕಳ ಊಟಮಾಡಿದರೆ ಆಗುವ ನಷ್ಟವೇನು ಎಂಬಂತೆ! ಆದರೆ ಕಳೆದ ತಿಂಗಳಲ್ಲಿ ರಾಜ್ಯದ ಅನುಭವವೇ ಬೇರೆ! ಅಷ್ಟೇ ಅಲ್ಲ ಈ ಹಿಂದೆ ೨೦೦೯ ಹಾಗೂ ೨೦೧೩ರಲ್ಲೂ ರಾಜ್ಯದ ಉತ್ತರ ಜಿಲ್ಲೆಗಳ ಅನುಭವಗಳು ಭಿನ್ನವಾದವು. ಅಕಾಲಿಕ ಅತೀ ಮಳೆಯ ಪರಿಣಾಮ, ಲೆಕ್ಕಕ್ಕೆ ಸಿಗದು. ನೇರವಾಗಿ ಬೆಳೆನಷ್ಟ, ಮನೆ ಬಿದ್ದ ಲೆಕ್ಕಾಚಾರಗಳೆ ಅಲ್ಲ! ಕೊಚ್ಚಿಹೋದ ಮಣ್ಣು, ನಿಲ್ಲಲಾಗದ ನೀರನ್ನು ಲೆಕ್ಕಕ್ಕೆ ಸೇರಿಸಲೇ ಸಾಮಾನ್ಯ ತಿಳಿವಿನಲ್ಲಿ ಬರುವುದಿಲ್ಲ. ಈ ಬಾರಿಯ ಲೆಕ್ಕಾಚಾರಗಳನ್ನು ಊಹಿಸಲು ಹಿಂದೆ ನಡೆಸಲಾದ ಸಮೀಕ್ಷೆಯಿಂದ ತಿಳಿಯಲು ಪ್ರಯತ್ನಿಸೋಣ.

ಬಿಸಿಲು ಮತ್ತು ಮಹಾಮಳೆಯ ರುದ್ರ ನರ್ತನ:

ರಾಯಚೂರು, ಬಳ್ಳಾರಿ ಮತ್ತು ಗುಲ್ಬರ್ಗ ಅತೀ ಹೆಚ್ಚು ಬಿಸಿಲನ್ನು ಅನುಭವಿಸುವ ಜಿಲ್ಲೆಗಳು. ಈ ವರ್ಷ ಇಲ್ಲಿ ಇದ್ದಕ್ಕಿದ್ದಂತೆ ವಿಚಿತ್ರ ಮಳೆಯ ದಿನಗಳನ್ನು ಅನುಭವಿಸಿವೆ.

ಅಂದರೆ ಇಲ್ಲಿನ ವಾತಾವರಣದ ವೈಪರೀತ್ಯದಿಂದಾಗಿ ಹೆಚ್ಚು ಮಳೆಯ ಕೂಡ ಆಗಾಗ್ಗೆ ಇಲ್ಲಿ ದಾಖಲಾಗಿದೆ. ಇಲ್ಲಿನ ಬಿಸಿಲಿನ ರೌದ್ರತೆಗೆ ಉದಾಹರಣೆಗಳನ್ನು ಕೊಡಲೇಬೇಕಿಲ್ಲ. ಇದು ಸಾಮಾನ್ಯವೆಂಬಂತೆ ಎಲ್ಲರ ಅನುಭವವಾಗಿದೆ. ಸುಮಾರು ೪೦-೪೫೦ ಸೆ. ನಷ್ಟು ದಾಖಲಾಗುವ ಇಲ್ಲಿನ ಬಿಸಿಲ ಝಳವೇ ಇಲ್ಲಿನ ನೆಲವನ್ನೂ ವಿಕಾಸಗೊಳಿಸಿದೆ. ಹೆಚ್ಚು ಸಮಯ ರಾಜ್ಯದ ಅತೀ ಉಷ್ಣಾಂಶದ ದಾಖಲೆಗಳು ಇದೇ ಪ್ರದೇಶದಿಂದಲೇ ಬರುತ್ತವೆಂಬುದು ಭಾರತೀಯ ಹವಮಾನ ಇಲಾಖೆಯ ವರದಿಗಳು ದೃಡಪಡಿಸುತ್ತಲೇ ಇವೆ. ಇಂತಹ ಪ್ರದೇಶದಲ್ಲೂ ಮಹಾಮಳೆಯ ತಾಂಡವ ನೃತ್ಯ ಆಗಾಗ್ಗೆ ಕಾಡಿರುವುದೂ ಇಲ್ಲಿನ ವೈಪರೀತ್ಯವನ್ನು ಮತ್ತಷ್ಟು ಬಲಪಡಿಸಿವೆ. ಅಲ್ಲದೆ ಇತ್ತಿಚೆಗಿನ ವಾತಾವರಣದ ವೈಪರೀತ್ಯವನ್ನು ಜಗತ್ತು ಅರಿವಿನ ಕಿಟಕಿಯಾಗಿಸುವ ಹೊತ್ತಿನಲ್ಲಿ ನಮ್ಮ ಹಿತ್ತಲಿನ ಅನುಭವಗಳೇ ಕಾರಣಗಳನ್ನು ಹೇಳುತ್ತಿವೆ. ಇದರಿಂದ ರೈತರಿಗೆ ಇದೆಂತಹ ಕಾಲಬಂತಪ್ಪಾ! ಬಿಸಿಲಿನ ಝಳಕ್ಕೆ ಸೋಲುತ್ತಿದ್ದ ನಮಗೆ ಮಳೆಯ ಕಾರಣದಿಂದಲೂ ಬೀತಿ ಕಾಡುವಂತಾಯಿತೇ? ಎನ್ನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಮಹಾಮಳೆಯೆಂದರೆ ೨೦೦೯ರ ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೩ರೊಳಗೆ ಕೇವಲ ಒಂದು ವಾರಕ್ಕಿಂತಲೂ ಕಡಿಮೆ ದಿನಗಳಲ್ಲಿ ವರ್ಷದ ಮುಕ್ಕಾಲು ಪಾಲು ಮಳೆಯಾಗಿದೆ. ಕೇವಲ ಐದು ದಿನಗಳಲ್ಲಿ ಬಿದ್ದ ಮಳೆಯು ಹತ್ತಾರು ವರ್ಷಗಳ ಗಳಿಕೆಯನ್ನೂ ಕೊಚ್ಚಿ ಹಾಕಿದೆ. ಮಾತ್ರವಲ್ಲ, ಆ ಮಳೆಯು ಎಂದಿಗಿಂತಲೂ ಬೀಳುವ ಮಳೆಗಿಂತಲೂ ೨-೩ಪಟ್ಟು ಕೆಲವೆಡೆ ಐದಾರು ಪಟ್ಟು ಮತ್ತೂ ಕೆಲವಡೆ ಹೆಚ್ಚೂಕಡಿಮೆ ೮ಪಟ್ಟು ಹೆಚ್ಚು ಮಳೆಯಾಗಿದೆ.

ಮುಂದಿನ ವರ್ಷವೂ ಈ ಜಿಲ್ಲೆಗಳಲ್ಲಿ ಇಂತಹದ್ದೇ ಆದರೆ ಇದಕ್ಕಿಂತಲೂ ಕಡಿಮೆ ಎನ್ನಬಹುದಾದ ಮಳೆಯ ದರ್ಶನವಾಗಿತ್ತು. ೨೦೧೩ರ ಸೆಪ್ಟೆಂಬರ್ ತಿಂಗಳ ಎರಡನೇವಾರದದಲ್ಲಿ ಈ ಭಾಗದಲ್ಲಿ ಬಿದ್ದ ಮಳೆಯಿಂದಾಗಿ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಲ್ಲಿನ ಮಹಾಮಳೆಯ ರೌದ್ರತೆ ಎಷ್ಟೆಂದರೆ ಕೆಲವೆಡೆ ಒಂದೇ ಗಂಟೆಯಲ್ಲಿ ೧೦೦ ಮಿ.ಮೀಗೂ ಹೆಚ್ಚು ಮಳೆಯಾದ ದಾಖಲೆಗಳಿವೆ. ಒಂದೇ ದಿನ ಸುರಿದ ಮಳೆ ಹೆಚ್ಚೂ ಕಡಿಮೆ ೮೦ಮಿ.ಮೀ ನಿಂದ ೧೩೦ಮಿ.ಮೀ.ನಷ್ಟು. ಸುರಪುರ ತಾಲ್ಲೂಕಿನ ಕಕ್ಕೇರಾದಲ್ಲಿ ೧೧೬ ಮಿ.ಮೀ., ಸಿಂಧನೂರು ತಾಲ್ಲೂಕಿನ ಕೆಲವೆಡೆ ೧೧೦ ಮಿ.ಮೀ. ಚಿಟಗುಪ್ಪಾದಲ್ಲಿ ೧೨೩ ಮಿ.ಮೀ. ಕನಕಗಿರಿಯಲ್ಲಿ ೧೦೨ ಮಿ.ಮೀ. ಹಾಗೂ ಯಲಬುರ್ಗಾದಲ್ಲಿ ೧೩೧ ಮಿ.ಮೀ. ಹೀಗೆ ಪಟ್ಟಿ ಬೆಳೆಯುತ್ತಾ ಸಾಗುತ್ತದೆ. ಇದೇನಿದು ಬಿಸಿಲೇ ರುದ್ರದರ್ಶನ ಕೊಡುವ ಈ ಪ್ರದೇಶದಲ್ಲಿ ಇಂತಹಾ ಮಳೆಯ ದಿನಗಳ ರೌದ್ರವತೆ ಅದೂ ಇತ್ತೀಚೆಗಿನ ದಿನಗಳಲ್ಲಿ ಎಂಬುದನ್ನು ರೈತರು ಆಶ್ಚರ್ಯ! ಮತ್ತೇ ಈ ವರ್ಷವೂ ಕಳೆದ ತಿಂಗಳ ಮಳೆಯಿಂದಾಗಿ ಮುಂಗಾರಿನ ಬೆಳೆಗಳಲ್ಲಿ ಮಳೆಯಿಂದ ನಷ್ಟವನ್ನು ಕಾಣುವಂತಾಗಿದೆ.

ಮಹಾಮಳೆಯಿಂದ ಮಣ್ಣಿನ ಮೇಲಾಗುವ ಪರಿಣಾಮ ಅತ್ಯಂತ ಭೀಕರವಾದುದು. ೨೦೦೯ರ ಸೆಪ್ಟೆಂಬರ್ ೨೯ ಮತ್ತು ಅಕ್ಟೋಬರ್ ೩ರ ನಡವೆ ಬಿದ್ದ ಮಹಾಮಳೆಯ ನಂತರದ ಸನ್ನಿವೇಶವನ್ನು ಬಳ್ಳಾರಿಯ ಕೇಂದ್ರೀಯ ಮಣ್ಣು ಸಂರಕ್ಷಣಾ ಸಂಶೋಧನಾ

ಮತ್ತು ತರಬೇತಿ ಸಂಸ್ಥೆಯ ವಿಜ್ಞಾನಿಗಳ ಸಹಯೋಗದೊಂದಿಗೆ, ಬೆಂಗಳೂರಿನ ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ಯೋಜನಾ ಸಂಸ್ಥೆಯ ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಅವರ ಮುಖ್ಯ ಗುರಿಯು ಈ ಮಳೆಯಿಂದಾದ ಮಣ್ಣಿನ ನಷ್ಟ ಮತ್ತು ಆಮೂಲಕ ಒಟ್ಟಾರೆ ಮಣ್ಣಿನಲ್ಲಿರುವ ಆಹಾರಾಂಶಗಳ ನಷ್ಟವನ್ನೂ ಅಂದಾಜಿಸುವುದಾಗಿತ್ತು. ೨೦೦೯ರ ಮಹಾಮಳೆಯ ಪರಿಣಾಮವಾಗಿ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಸುಮಾರು ೧೨೦ ದಶಲಕ್ಷ ಟನ್ನಿನಷ್ಟು ಮಣ್ಣು ಕೊಚ್ಚಿ ಹೋಯಿತೆಂದು ಅಂದಾಜಿಸಲಾಗಿದೆ. ಇದರಲ್ಲಿನ ಆಹಾರಾಂಶಗಳನ್ನೂ ಪ್ರಮುಖವಾಗಿ ಕಳೆದುಕೊಂಡ ಸಾರಜನಕ, ರಂಜಕ, ಪೊಟ್ಯಾಶ್ ಮತ್ತಿತರ ಬಹು ಮುಖ್ಯವಾದ ಮೂಲವಸ್ತುಗಳನ್ನು ಅಂದಾಜಿಸಿ, ಇದರ ಜೊತೆಗೆ ಇದರಲ್ಲಿದ್ದ ಸಾವಯವ ಇಂಗಾಲವೂ ಕೊಚ್ಚಿ ಹೋದದ್ದನ್ನೂ ಸೇರಿಸಿದರೆ ಸಾವಿರಾರು ಕೋಟಿ ರೂಪಾಯಿಯ ಮೌಲ್ಯದ ಆಹಾರಾಂಶಗಳನ್ನು ಈ ನೆಲದ ಮಣ್ಣುಗಳು ಕೇವಲ ಐದೇ ದಿನದಲ್ಲಿ ಕಳೆದುಕೊಂಡಿದ್ದವು. ಸುಮಾರು ಐದಾರು ನೂರು ಕೋಟಿ ರೂಪಾಯಿಗಳಷ್ಟು ರಸಗೊಬ್ಬರ ಮೌಲ್ಯದ ನಷ್ಟವನ್ನು ಇಡೀ ನೆಲ ಅನುಭವಿಸಿದೆ.

ಎರಡಾದ ಪರಿಸರಗಳು

ಈ ಬಗೆಯ ಹವಾಮಾನ ವೈಪರೀತ್ಯದ ಪರಿಸರಕ್ಕೆ ಪ್ರಮುಖ ಕಾರಣವನ್ನು ಭೂಮಿಯ ತಾಪಮಾನದ ಏರಿಕೆಯಲ್ಲಿ ಗುರುತಿಸಲಾಗುತ್ತದೆ. ಭೂಮಿಯ ತಾಪಮಾನದ ಒಟ್ಟಾರೆ ಏರಿಕೆಯಲ್ಲಿ ನಮ್ಮ ನಗರೀಕರಣದ ಪ್ರಭಾವ ಅತಿ ಹೆಚ್ಚು. ಇದರ ಬಗ್ಗೆ ೧೮೧೦ರಷ್ಟು ಹಿಂದೆಯೇ ಹವಾಮಾನಶಾಸ್ತ್ರದ ಪಿತಾಮಹ ಎಂದು ಹೆಸರಾದ ಲ್ಯೂಕ್ ಹೊವರ್ಡ್ ಎಚ್ಚರಿಸಿದ್ದಾರೆ. ಆದಾಗ್ಯೂ ನಮ್ಮ ನಗರೀಕರಣದ ವ್ಯಾಮೋಹ ಹೋಗಲೇ ಇಲ್ಲ. ಬದಲಾಗಿ ಬೆಳೆಯುತ್ತಲೇ ಇದೆ. ನಮ್ಮ ರಾಜ್ಯದಲ್ಲಿನ ಪ್ರಸಕ್ತ ಸ್ಥಿತಿಯನ್ನು ಗಮನಿಸಿದರೆ ಅಚ್ಚರಿ ಹಾಗೂ ಭಯ ಒಟ್ಟಿಗೆ ಆಗುತ್ತವೆ. ಏಕೆಂದರೆ ರಾಜ್ಯದ ಪ್ರತೀ ೬ ಜನರಲ್ಲಿ ಒಬ್ಬರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಇದರ ಜತೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಸುಮಾರು ೨೬ ನಗರಗಳು ನಮ್ಮ ರಾಜ್ಯದಲ್ಲಿವೆ. ಹಾಗೇನೆ ಯಾವುದಾದರೂ ಸಣ್ಣ ಕಾರಣಕ್ಕೆ, ಮಕ್ಕಳ ಓದಿನ ನೆಪದಲ್ಲೋ ಅಥವಾ ತಂದೆ ತಾಯಿಯರ ಆರೋಗ್ಯದ ಕಾರಣಕ್ಕೋ ನಗರದ ವಾಸ ಎಲ್ಲರಿಗೂ ಹಿತವಾಗುತ್ತಲಿದೆ. ನಗರ ಜೀವನದಲ್ಲಿನ ಸಮಯದ ಅಭಾವದಿಂದಾಗಿ ವಾಹನಗಳ ಬಳಕೆಯು ಹೆಚ್ಚಾಗಿ ಅವುಗಳ ಸಂಖ್ಯೆಯು ಮಿತಿ ಮೀರಿ ಬೆಳೆಯುತ್ತಿವೆ, ಪೆಟ್ರೋಲಿನ ಬಳಕೆಯು ಹೆಚ್ಚಾಗುತ್ತಿದೆ. ಅದಕ್ಕೆ ಉತ್ತರವಾಗಿ ವಾತಾವರಣದ ಗಾಳಿಯನ್ನು ಸೇರುವ ಇಂಗಾಲದ ಪ್ರಮಾಣವು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಭೂಮಿಗೆ ಬಿಸಿ ವಾತಾವರಣದ ಪರಿಸ್ಥಿತಿ ಅನಿವಾರ್ಯವಾಗಿದೆ.

ಒಂದು ಅಂದಾಜಿನಂತೆ ೨೦೫೦ರ ವೇಳೆಗೆ ಜಾಗತಿಕ ಮಟ್ಟದಲ್ಲಿ ಮುಕ್ಕಾಲು ಪಾಲು ಜನ ನಗರವಾಸಿಗಳಾಗಿರುತ್ತಾರಂತೆ. ಇದಕ್ಕೆ ಅಪಾರ ಜನಸಂಖ್ಯೆಯ ನಮ್ಮ ದೇಶದ ಪಾಲೂ ಹೆಚ್ಚಿನದಾಗಿಯೇ ಸೇರಿರುತ್ತದೆ. ಇದರಿಂದಾಗಿ ನಮ್ಮ ನೆಲದ ಮೇಲಿನ

ಒತ್ತಡ ಹೆಚ್ಚುತ್ತಲೇ ಬೆಳೆಯುತ್ತದೆ. ನಗರಗಳ ವಾಸದ ಹಿತಕ್ಕಾಗಿ ಅನಿಯಂತ್ರಿತ ಕಟ್ಟಡ ನಿರ್ಮಾಣವಾಗುತ್ತಾ ನಗರಗಳು ಕಾಂಕ್ರೀಟ್ ಕಾಡುಗಳಾಗುತ್ತಿವೆ. ಇದರಿಂದ ವಾತಾವರಣದ ಹಗಲಿನ ಉಷ್ಣತೆಯು ನಿರಂತರವಾಗಿ ಕಟ್ಟಡಗಳಲ್ಲಿ ಹೀರಿಕೊಂಡು ರಾತ್ರಿಯಲ್ಲಿ ಹೊರಸೂಸುವುದರಿಂದ ಇಡೀ ದಿನ ತಾಪಮಾನದ ಹೆಚ್ಚಳವನ್ನು ಅನುಭವಿಸುತ್ತೇವೆ. ಜೊತೆಯಲ್ಲಿ ವಾತಾವರಣದ ಇಂಗಾಲವೂ ಇದರ ಜೊತೆ ಸೇರಿಕೊಳ್ಳುತ್ತದೆ. ಭೂಮಿಗೆ ಜ್ವರ, ಜೀವಿಗಳ ಬದುಕಿಗೆ ಬರ. ಭೂಮಿಯ ಪರಿಸರದ ಹಿತವನ್ನು ಕುರಿತ ಜಾಗತಿಕ ಮಾತುಗಳಿಗೆ ೨೫ ವರ್ಷಗಳಾದವು. ಈ ವರ್ಷಗಳಲ್ಲೇ ನಗರೀಕರಣವು ಹೆಚ್ಚಿದೆ.

ನಗರಗಳು ಉಷ್ಣವನ್ನು ಹೆಚ್ಚಿಸುವ ದ್ವೀಪಗಳಂತೆ ವರ್ತಿಸುತ್ತವೆ. ನಮ್ಮ ಸುತ್ತಲಿನ ಊರುಗಳನ್ನೇ ನೋಡಿ. ಬೆಂಗಳೂರು, ಮೈಸೂರು, ಚಿತ್ರದುರ್ಗ, ತುಮಕೂರು, ದಾವಣಗೆರೆ ಮುಂತಾದವುಗಳಲ್ಲಿಯೂ ಸಮೀಪದ ಹಳ್ಳಿಗಳಿಗಿಂತಾ ಹೆಚ್ಚಿನ ಉಷ್ಣತೆಯನ್ನು ಗಮನಿಸಬಹುದು. ಆದರೆ ಈ ಕುರಿತು ನಿಖರ ಮಾಹಿತಿಗಳನ್ನು ನಾವು ಕಲೆ ಹಾಕಿಲ್ಲ. ನಗರದ ವಾತಾವರಣಗಳಲ್ಲಿ ಕಟ್ಟಡಗಳು, ಅಲ್ಲಿನ ವಾಹನಗಳ ದಟ್ಟಣೆ, ಒಟ್ಟೂ ಜನಸಂಖ್ಯೆಯ ಕಾರಣದಿಂದ ಉಂಟಾಗುವ ಹೊರಸೂಸು ಇವೆಲ್ಲವೂ ಹೆಚ್ಚಿನ ತಾಪಮಾನವನ್ನು ಸೇರಿಸುತ್ತಲಿವೆ. ಸಮಾನಾಂತರವಾದ ಬೆಳವಣಿಗೆಗೆ ಸ್ಥಳಾವಕಾಶದ ಕೊರತೆಯಿಂದಾಗಿ ನೇರವಾದ ಅಂದರೆ ಮಹಡಿಗಳ ಬೆಳವಣಿಗೆಯನ್ನು ಕಾಣುತ್ತೇವೆ. ಅಪಾರ್ಟ್‌ಮೆಂಟ್ ಗಳುಎಲ್ಲೆಲ್ಲಿಯೂ ಹೆಚ್ಚುತ್ತಿವೆ. ಇದರಿಂದಾಗಿ ಪ್ರತೀ ಚದರದಲ್ಲೂ ಒಟ್ಟು ವಾಸಿಸುವವರ ಸಂಖ್ಯೆಯು ಹೆಚ್ಚುತ್ತಲಿದೆ. ಹೆಚ್ಚಿನ ಜನಸಾಂದ್ರತೆಯಿಂದಾಗಿ ಅವರ ಬಳಕೆಯ ವಸ್ತುಗಳು, ತ್ಯಾಜ್ಯ, ಶಾಖ ಎಲ್ಲವೂ ಹೆಚ್ಚಿ, ಅದರಿಂದ ಒಟ್ಟಾರೆಯಾಗಿ ಬದಲಾದ ಪರಿಸರ ನಿರ್ಮಾಣವಾಗುತ್ತದೆ. ನಗರೀಕರಣದಿಂದಾಗಿ ಸುತ್ತಮುತ್ತಲಿನ ಹಳ್ಳಿಗಳೂ ಬಲಿಯಾಗುತ್ತವೆ. ಹಳ್ಳಿಗಳಿಂದ ಆಹಾರದ ಸರಭರಾಜಿನಿಂದಾಗಿ ಮಣ್ಣುಗಳು ಸತ್ವವನ್ನು ಕಳೆದುಕೊಳ್ಳುತ್ತವೆ. ಅಲ್ಲಿನ ಆಹಾರ ಸಾಮಾಗ್ರಿ ಮೊದಲಾದವು ನಗರಕ್ಕೆ ಬಂದು, ತ್ಯಾಜ್ಯವಾಗಿ ಕೊಳೆಯಲಾರಂಭಿಸುತ್ತವೆ. ಹೀಗಾಗಿ ಎರಡೂ ಪ್ರದೇಶಗಳೂ ನಷ್ಟಕ್ಕೆ ಒಳಗಾಗುತ್ತವೆ. ಎರಡೂ ಪ್ರದೇಶಗಳ ಅಭಿವೃದ್ಧಿಯಲ್ಲಿ ಸಾಮರಸ್ಯ ಸಾಧಿಸದ ಹೊರತು ಸಾರ್ವತ್ರಿಕ ಏಳಿಗೆಯನ್ನು ಪಡೆಯಲಾಗದು.

ನಮ್ಮ ರಾಜ್ಯದಲ್ಲಿ ಪ್ರತಿಶತ ೩೮ರಷ್ಟು ಅಂದರೆ ಸರಿಸುಮಾರು ೨ಕೋಟಿ ನಗರವಾಸಿಗಳಾಗಿದ್ದಾರೆ. ಇವರುಗಳಿಗೆ ಸರಬರಾಜಾದ ಆಹಾರ ನಗರಗಳಲ್ಲೇ ಕೊಳೆಯುತ್ತದೆ. ಅದು ಗೊಬ್ಬರವಾಗಿ ವಾಪಾಸ್ಸು ಹಳ್ಳಿಗಳ ಜಮೀನಿಗೆ ತಲುಪುವುದಿಲ್ಲ. ಹಳ್ಳಿಯ ತೋಟಗಳ ಹೂ-ಹಣ್ಣುಗಳು ತಾಜಾ ಆಗಿ ಬಂದು ನಗರದ ಮಾರುಕಟ್ಟೆಯಲ್ಲಿ ಕಳೆಕಟ್ಟಿ, ಮಾರಾಟಗೊಂಡು, ಆ ಊರಲ್ಲೇ ಉಳಿದು, ಕೊಳೆತು ನಾರುತ್ತವೆ. ಜೊತೆಗೆ ಉಳಿದ ಆಹಾರ ಪದಾರ್ಥವೂ ನಗರಗಳ ಸೇರಿ ಅಲ್ಲೇ ಚರಂಡಿ ನೀರಿಗೆ ಸೇರುತ್ತಾ ಅಲ್ಲಲ್ಲೇ ಕೊಳೆಯುತ್ತಾ ತಾಜಾಗಳಿಂದ ತ್ಯಾಜ್ಯಗಳಾಗುತ್ತವೆ. ಮಲಿನತೆಯಿಂದ ನಗರ ನಲುಗಿದರೆ, ಕಳೆದುಕೊಂಡು ಗ್ರಾಮೀಣ ಪರಿಸರ ನಲುಗುತ್ತದೆ.*

ದೆಹಲಿಗೆ ಕಾಣುವ ಕರ್ನಾಟಕ

–ಡಾ.ಪುರುಷೋತ್ತಮ ಬಿಳಿಮಲೆ

ಕೆಲವು ದಿನ ಕಾರಣಾಂತರಗಳಿಂದ ದೆಹಲಿಯ ಮ್ಯಾಕ್ಸ್ ಆಸ್ಪತ್ರೆಯಲ್ಲಿದ್ದೆ; ಅಲ್ಲಿ ಶುಶ್ರೂಷೆ ಮಾಡುತ್ತಿದ್ದ ದಾದಿಯರೆಲ್ಲ ಕೇರಳದವರು. ನನಗೆ ಹರಕು ಮುರುಕು ಮಲೆಯಾಳಂ ಬರುತ್ತಿದ್ದುದರಿಂದ ಅವರೊಡನೆ ತುಸು ಹೆಚ್ಚೇ ಮಾತಾಡಲು ಸಾಧ್ಯವಾಯಿತು. ಆಸ್ಪತ್ರೆಯಲ್ಲಿ ನಾನು ಭೇಟಿ ಮಾಡಿದ ಆರು ಜನ ದಾದಿಯರಲ್ಲಿ ನಾಲ್ಕು ಜನ ಮಂಗಳೂರಲ್ಲಿ ತರಬೇತಿ ಪಡೆದವರು, ಇನ್ನಿಬ್ಬರು ಬೆಂಗಳೂರಲ್ಲಿ. ಇದೇ ರೀತಿ ದೆಹಲಿಯ ಯಾವುದೇ ಆಸ್ಪತ್ರೆಗೆ ಹೋದರೂ ಕೇರಳದ ದಾದಿಯರು ನಿಮ್ಮನ್ನು ಇದಿರುಗೊಳ್ಳುತ್ತಾರೆ. ಗುರುಗಾಂವ್‌ನ ವೇದಾಂತ, ಆರ್ಟಿಮಿಸ್, ದೆಹಲಿಯ ಫೋರ್ಟಿಸ್, ಮ್ಯಾಕ್ಸ್ , ಮೋದಿ, ಮೊದಲಾದ ಪ್ರಖ್ಯಾತ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ದಾದಿಯರ ಸಂಖ್ಯೆ ಸುಮಾರು ಎಂಟು ಸಾವಿರಕ್ಕೂ ಅಧಿಕ. ಇದರಲ್ಲಿ ಹೆಚ್ಚಿನವರೆಲ್ಲ ಕರ್ನಾಟಕದಲ್ಲಿ ಕಲಿತವರು. ಕರ್ನಾಟಕದಲ್ಲಿ ಅಷ್ಟೊಂದು ಸಂಖ್ಯೆಯ ನರ್ಸಿಂಗ್ ಶಾಲೆಗಳಿವೆ, ಆದರೆ ಅಲ್ಲಿ ಕನ್ನಡಿಗರು ಕಲಿಯುತ್ತಿಲ್ಲವೇ? ಕೇರಳದ ಬಾಲೆಯರು ಕರ್ನಾಟಕದಲ್ಲಿ ಕಲಿತು ದೇಶದಾದ್ಯಂತ ಸೇವೆ ಮಾಡಬಲ್ಲವರಾದರೆ ಕನ್ನಡದ ಹುಡುಗಿಯರಿಗೆ ಅದು ಯಾಕೆ ಸಾಧ್ಯವಾಗುತ್ತಿಲ್ಲ? ಅವರು ರಾಜ್ಯ ಬಿಟ್ಟು ಹೊರಗೆ ಹೋಗಲು ಹೆದರುತ್ತಿದ್ದಾರೆಯೇ? ರಕ್ಷಕರು ಮಕ್ಕಳನ್ನು ಹೊರಗೆ ಕಳಿಸಲು ಹೆದರುತ್ತಿದ್ದಾರೆಯೇ?

ದೆಹಲಿಯ ಯಾವುದೇ ಕಛೇರಿಗಳಿಗೆ ಹೋಗಿ, ಅಲ್ಲಿ ನಾಲ್ಕಾರು ಮಲೆಯಾಳಿಗಳೋ, ತಮಿಳರೋ ಕಾಣಸಿಗುತ್ತಾರೆ. ಕೇಂದ್ರ ಸರಕಾರದ ಆಯಕಟ್ಟಿನ ಜಾಗಗಳಲ್ಲಿ ಚೆನ್ನಾಗಿ ಕೆಲಸ ಮಾಡುವ ಕನ್ನಡಿಗರನ್ನು ಹೊರತು ಪಡಿಸಿದ ದಕ್ಷಿಣ ಭಾರತೀಯರನ್ನು ಕಾಣಬಹುದು. ಸಾಮಾನ್ಯವಾಗಿ ಕರ್ನಾಟಕದಾದ್ಯಂತದಿಂದ ಸಹಾಯ ವಿವಿಧ ಬಗೆಯ ಸಹಾಯ ಕೇಳಿ ಜನ ನನಗೆ ಫೋನ್ ಮಾಡುತ್ತಾರೆ. ಅವರೆಲ್ಲ ಕೇಳುವ ಸಾಮಾನ್ಯ ಪ್ರಶ್ನೆಯೆಂದರೆ ' ಅಲ್ಲಿ ಯಾರಾದರೂ ಕನ್ನಡದವರು ಇದ್ದಾರೇನ್ರಿ? 'ಇಲ್ಲ' ಅಂದಾಗ ಅವರ ಮುಖ ಬಾಡುತ್ತದೆ. ತಮ್ಮ ಸಮಸ್ಯೆಗಳನ್ನು ಕನ್ನಡದಲ್ಲಿ ಹೇಳಿಕೊಳ್ಳಲು ಅವರಿಗೆಲ್ಲ ಧೆಹಲಿಯಲ್ಲಿ ಯಾರಾದರೂ ಬೇಕು. ಬಹಳ ಮುಖ್ಯವಾದ ವಿಶ್ವವಿದ್ಯಾಲಯ, ಅನುದಾನ ಆಯೋಗ, ಮಾನವ ಸಂಪನ್ಮೂಲ ಇಲಾಖೆ, ಮೊದಲಾದೆಡೆಗಳಲ್ಲಿ ಕನ್ನಡಿಗರು ಇಲ್ಲ. ಯಾಕೆ ಕನ್ನಡಿಗರು ಹೊರಗಡೆಗೆ ಹೋಗುತ್ತಿಲ್ಲ? ಎಂಬ ಪ್ರಶ್ನೆ ಕಳೆದ ೨೦ ವರ್ಷಗಳಿಂದ ದೆಹಲಿಯಲ್ಲಿ ಬದುಕುತ್ತಿರುವ ನನ್ನನ್ನು ಆಗಾಗ ಕಾಡುತ್ತಲೇ ಇದೆ.

ಚಾರಿತ್ರಿಕವಾಗಿ ನೋಡಿದರೆ, ಕರ್ನಾಟಕದಿಂದ ಹೊರಗೆ ಹೋದ ಜನರಿಗಿಂತ ಕರ್ನಾಟಕದ ಒಳನುಗ್ಗಿದ ಜನರ ಸಂಖ್ಯೆಯೇ ಅಧಿಕ. ಈ ಒಳ ಹರಿವಿನ ಚರಿತ್ರೆ ಬಹಳ ಪ್ರಾಚೀನವಾದುದು. ಕ್ರಿ ಶ ೮೪೦ರಲ್ಲಿ ರಚಿತವಾದ 'ವಡ್ಡಾರಾಧನೆ'ಯಲ್ಲಿನ ಒಂದು ಕತೆಯ ಪ್ರಕಾರ ಉತ್ತರ ಭಾರತದಲ್ಲಿ ೧೨ ವರ್ಷಗಳ ಭೀಕರ ಕ್ಷಾಮ ಬಂದಾಗ,

ತೊಟ್ಟಿಲಲ್ಲಿ ಮಲಗಿದ್ದ ಮಗುವೊಂದರ ಆದೇಶದನುಸಾರವಾಗಿ ಭದ್ರ ಬಾಹು ಭಟಾರರು ಸಂಪ್ರತಿ ಚಂದ್ರಗುಪ್ತರ ಜೊತೆ ಬಂದಿಳಿದದ್ದು ಕರ್ನಾಟಕದ ಶ್ರವಣಬೆಳಗೊಳದಲ್ಲಿ. ಇದೇ ರೀತಿ ಮುಂದೆ ರಾಮಾನುಜಾರ್ಯರು ಕೂಡಾ ಕನ್ನಡ ಪ್ರದೇಶವನ್ನೇ ವಲಸೆಗೆ ಆಯ್ದುಕೊಂಡರು. ಉತ್ತರಭಾರತದಲ್ಲಿ ಹುಟ್ಟಿದ ಜೈನ ಧರ್ಮಕ್ಕೆ ಕರ್ನಾಟಕವು 'ಆಡುಂಬೊಲ' ಆಯಿತೆಂದು ಶಾಸನವೊಂದು ವರ್ಣಿಸುತ್ತದೆ. ಹೀಗೆ ಹೊರಗಿನಿಂದ ಕರ್ನಾಟಕಕ್ಕೆ ವಲಸೆ ಬಂದು, ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡ ದೊಡ್ಡ ಚರಿತ್ರೆಯೇ ನಮ್ಮ ಮುಂದಿದೆ. ಇದೀಗ ಜಾಗತೀಕರಣದ ಫಲವಾಗಿ ಬೃಹತ್ತಾಗಿ ಬೆಳೆದ ಬೆಂಗಳೂರು ನಗರದಲ್ಲಿ ಹೊರಗಿನಿಂದ ಬಂದು ನೆಲೆಸಿದವರ ಸಂಖ್ಯೆಯು, ಬೆಂಗಳೂರಿನಿಂದ ಹೊರಗೆ ಹೋದವರ ಸಂಖ್ಯೆಗಿಂತ ಬಹಳ ಅಧಿಕ.

ಇತರ ದಕ್ಷಿಣ ಭಾಷೀಯರ ವಲಸೆಗೆ ಹೋಲಿಸಿದರೆ ಕನ್ನಡಿಗರ ವಲಸೆ ಬಹಳ ಕಡಿಮೆ. ೨೦ ನೇ ಶತಮಾನದ ಆರಂಭ ಕಾಲದಲ್ಲಿ ಕರಾವಳಿ ಭಾಗದಿಂದ ದೊಡ್ಡ ಪ್ರಮಾಣದಲ್ಲಿ ಜನರು ಮುಂಬೈಗೆ ವಲಸೆ ಹೋದರು. ಆದರೆ ಅದರ ಪ್ರಮಾಣ ಈಗ ಕಡಿಮೆಯಾಗುತ್ತಿದೆ. ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡ ಕರಾವಳಿಯ ತುಳುವರು ಮಾತ್ರ ದೇಶದಾದ್ಯಂತ ಇಂದಿಗೂ ಕಾಣಸಿಗುತ್ತಾರೆ, ಆದರೆ ಕರ್ನಾಟಕದ ಇತರ ಭಾಗದ ಜನರು ಮಾತ್ರ ಎಲ್ಲಿಯೂ ಆ ಪ್ರಮಾಣದಲ್ಲಿ ಕಾಣಸಿಗುತ್ತಿಲ್ಲ. ಗೋವಾದಲ್ಲಿ ಕಟ್ಟಡದ ಕೆಲಸದಲ್ಲಿ ನಿರತರಾಗಿದ್ದ ಬಡವರೆಲ್ಲ ಬಿಜಾಪುರದ ಕಡೆಯಿಂದ ವಲಸೆ ಹೋದವರು. ಹಾಗಾದರೆ ಕರಾವಳಿ ಮತ್ತು ಬಿಜಾಪುರ ಬಿಟ್ಟರೆ ಉಳಿದೆಡೆಗಳಿಂದ ಕನ್ನಡಿಗರು ಹೊರಗಡೆಗೆ ಹೋಗುತ್ತಿಲ್ಲವೇ? ಅವರೆಲ್ಲ ಇರುವಲ್ಲಿಯೇ ಸುಖವಾಗಿದ್ದಾರೆಯೇ?

ಮಲೆಯಾಳಿಗಳು ಹೋದ ಕಡೆಯೆಲ್ಲ ಪರಸ್ಪರ ಸಹಾಯ ಮಾಡಿಕೊಂಡು ಬೆಳೆಯುತ್ತಾರೆ. ತಮಿಳರು ತಮ್ಮ ಭಾಷೆ ಸಂಸ್ಕೃತಿ ಅಂತ ಹೇಳಿಕೊಂಡು ಅದನ್ನು ಪ್ರಚಾರ ಮಾಡುತ್ತಾ ಇಂದು ವಿಶ್ವದಾದ್ಯಂತ ಹರಡಿಕೊಂಡಿದ್ದಾರೆ. ಅನಿವಾಸಿ ಭಾರತೀಯರಲ್ಲಿ ಗುಜರಾತಿಗಳನ್ನು ಬಿಟ್ಟರೆ ತೆಲುಗಿನವರಿಗೆ ಎರಡನೇ ಸ್ಥಾನ. ಆದರೆ ಕನ್ನಡಿಗರದು ಎಲ್ಲೆಡೆಯೂ ದುರ್ಬಲ ಧ್ವನಿ.

ಡಾ. ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಇಡೀ ಕರ್ನಾಟಕ ಸಹಜವಾಗಿಯೇ ಸಂಭ್ರಮಿಸಿತು. ಪ್ರಶಸ್ತಿ ಅವರಿಗೆ ರಾಷ್ಟ್ರೀಯ ಮನ್ನಣೆಯನ್ನು ತಂದುಕೊಟ್ಟಿತು. ಆದರೆ ಕರ್ನಾಟಕ ಸಂಭ್ರಮಿಸಿದ ಹಾಗೆ ದೇಶ ಕಂಬಾರರ ಬಗೆಗೆ ಸಂಭ್ರಮಿಸಿತೇ? ಇಡೀ ರಾಷ್ಟ್ರ ಸಂಭ್ರಮಿಸುವ ಹಾಗೆ ಮಾಡಲು ನಮಗೆ ಸಾಧ್ಯವಾಯಿತೇ? ರವೀಂದ್ರನಾಥ ಠಾಗೋರರ ೧೫೦ನೇ ಹುಟ್ಟುಹಬ್ಬವನ್ನು ಒಂದು ಜಾಗತಿಕ ಉತ್ಸವವಾಗಿ ಆಚರಿಸಲಾಯಿತು. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಠಾಗೋರರ ಬಗ್ಗೆ ಬಗೆಬಗೆಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಆದರೆ ನಮಗೆ ಆ ಬಗೆಯ ವಿಸ್ತಾರದಲ್ಲಿ ಕೆಲಸ ಮಾಡಲಾಗುತ್ತಿಲ್ಲ. ಅತ್ಯಂತ ಸತ್ವಭರಿತ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಕ್ತಿಯುತವಾದ ವೇದಿಕೆಯನ್ನು ನಿರ್ಮಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ.

ಇಡೀ ಕರ್ನಾಟಕಕ್ಕೆ ಹೊಸಬಗೆಯ ಚೈತನ್ಯ ನೀಡಿದ ಮಹಾಕವಿ ಕುವೆಂಪು ಅವರ ಶತಮಾನೋತ್ಸವವನ್ನೇ ಒಂದು ರಾಷ್ಟ್ರೀಯ ಉತ್ಸವವನ್ನಾಗಿ ಮಾಡಲು ನಮಗೆ ಶಕ್ತಿ ಸಾಲದಾಯಿತು. ಬೇಂದ್ರೆ, ಮಾಸ್ತಿ, ಅಡಿಗ, ಲಂಕೇಶ್, ಕಾರಂತ, ನರಸಿಂಹ ಸ್ವಾಮಿ ದೇಶಕ್ಕೆ ಗೊತ್ತಿಲ್ಲ. ದೆಹಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೇರಳದ ಕಥಕಳಿ ಕಂಡಾಗ ಸಂತೋಷವಾಗುತ್ತದೆ, ಆದರೆ ಯಕ್ಷಗಾನ ಇಲ್ವಲ್ಲಾ ಎಂದಾಗ ವಿಷಾದವಾಗುತ್ತದೆ. ಸುಬ್ರಹ್ಮಣ್ಯ ಭಾರತಿ ರಸ್ತೆಯಲ್ಲಿ ವಾಹನ ಚಲಾಯಿಸುವಾಗ ಹೆಮ್ಮೆಯಾಗುತ್ತದೆ, ಆದರೆ ಕರ್ನಾಟಕ ಕಾಣೆಯಾಗಿದೆಯಲ್ಲಾ ಅಂದುಕೊಂಡಾಗ ವಾಹನದ ವೇಗ ಗೊತ್ತಿಲ್ಲದೇ ನಿಧಾನವಾಗುತ್ತದೆ.

ಇದಕ್ಕೆ ಏನು ಕಾರಣ? ಮುಖ್ಯವಾಗಿ ಕರ್ನಾಟಕವನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆ ನಮ್ಮಲ್ಲಿ ಇಲ್ಲ. ರಾಜ್ಯವನ್ನು ರಾಜಧಾನಿಯಲ್ಲಿ ಎತ್ತಿಹಿಡಿಯಬೇಕಾದ ಲೋಕ ಸಭಾ ಪ್ರತಿನಿಧಿಗಳಿಗೆ ಮತ್ತೆ ರಾಜ್ಯದ ರಾಜಕಾರಣದಲ್ಲಿಯೇ ಆಸಕ್ತಿ. ದೇಶದ ಬಜೆಟ್ ಸಿದ್ಧತೆಯಲ್ಲಿ ನಮ್ಮ ಜನ ಪ್ರತಿನಿಧಿಗಳ ಕೊಡುಗೆ ಎಷ್ಟು? ಬದಲಾದ ಇಂದಿನ ಜಾಗತಿಕ ಸಂದರ್ಭದಲ್ಲಿ ಒಂದು ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುನ್ನೋಟ ಇರಿಸಿಕೊಂಡು ಕೆಲಸ ಮಾಡುವ ಎಷ್ಟು ಜನ ಪ್ರಜ್ಞಾವಂತರನ್ನು ಕರ್ನಾಟಕ ಚುನಾವಣೆಗಳಲ್ಲಿ ಆರಿಸಿ ಕಳಿಸಿದೆ?

ಕೇರಳದ ಮಲೆಯಾಳ ಮನೋರಮಾ ಪತ್ರಿಕೆಯೊಂದಕ್ಕೇ ದೆಹಲಿಯಲ್ಲಿ ೧೨ ಜನ ಪತ್ರಕರ್ತರು ಪ್ರತಿನಿಧಿಗಳಿದ್ದಾರೆ. ಈ ಭಾಗ್ಯ ಕರ್ನಾಟಕದ ಯಾವ ಪತ್ರಿಕೆಗೂ ಇಲ್ಲ. ದೊಡ್ಡ ಸಂಖ್ಯೆಯ ಪತ್ರಕರ್ತರ ಹಾಗೂ ಐ ಎ ಎಸ್ ಅಧಿಕಾರಿಗಳ ಲಾಬಿಯೂ ಕರ್ನಾಟಕಕ್ಕೆ ಇಲ್ಲ.

ಪ್ರಜಾಪ್ರಭುತ್ವ ಮತ್ತು ರಾಷ್ಟ್ರದ ಪರಿಕಲ್ಪನೆಗಳನ್ನು ನಾವು ಒಪ್ಪಿಕೊಂಡಿರುವುದರಿಂದ ಅದರ ಪೂರ್ಣ ಪ್ರಯೋಜನ ಪಡೆಯಲು ಕರ್ನಾಟಕದ ಸರಕಾರ ಹಾಗೂ ಜನತೆ ತೀವ್ರ ಪ್ರಯತ್ನ ನಡೆಸಬೇಕು. ಮುಖ್ಯವಾಗಿ ರಾಜ್ಯದ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಸಮರ್ಥವಾಗಿ ಮಂಡಿಸಿ, ಕೇಂದ್ರ ಸರಕಾರವನ್ನು ಹೇಗೋ ಹಾಗೆ, ಇತರ ಭಾಷಿಕ ಸಂಸದರನ್ನು ತನ್ನೆಡೆಗೆ ಆಕರ್ಷಿಸುವಂತ ಪ್ರತಿಭಾವಂತ ರಾಜಕಾರಣಿಗಳನ್ನು ಕನ್ನಡದ ಜನತೆ ಲೋಕ ಸಭೆಗೆ ಆರಿಸಿ ಕಳಿಸಬೇಕು. ಈ ಸಂಸದರಿಗೆ ರಾಜ್ಯ, ರಾಷ್ಟ್ರ, ಭಾಷೆ, ಅಭಿವೃದ್ಧಿ, ಆಧುನಿಕ ತಂತ್ರಜ್ಞಾನ ಮತ್ತಿತರ ವಿಷಯಗಳ ಬಗೆಗೆ ಆಳವಾದ ತಿಳುವಳಿಕೆ ಇರಬೇಕು. ಜಗತ್ತಿನ ಜೊತೆಗೆ ಒಂದು ಬಗೆಯ ಬೌದ್ಧಿಕ ಅನುಸಂಧಾನ ಏರ್ಪಡಬೇಕಾದ್ದು ಕರ್ನಾಟಕದ ಇಂದಿನ ಅಗತ್ಯಗಳಲ್ಲೊಂದು.

ಹೀಗೆ ದೂರದ ದೆಹಲಿಯಲ್ಲಿ ಕುಳಿತು ನೋಡಿದಾಗ ನನ್ನ ರಾಜ್ಯ ತುಂಬ ದುರ್ಬಲವಾಗಿ ಕಾಣಿಸುತ್ತಿದೆ. ಮೂಲತ: ಅದು ದುರ್ಬಲವಲ್ಲ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಷಯದಲ್ಲಿ ಅದಕ್ಕೆ ಅಸಾಧಾರಣವಾದ ಶಕ್ತಿಯಿದೆ. ಅದನ್ನು ಸಮರ್ಪಕವಾಗಿ ಪ್ರತಿನಿಧಿಸುವವರಿಲ್ಲ ಅಷ್ಟೆ.*

ಕೃಷ್ಣರಾಜಪೇಟೆ ಸರ್ಕಾರಿ ಶಾಲೆಯ ಯಶೋಗಾಥೆ

– ಕೆ. ವಾಸು

ಪ್ರಸ್ತುತ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಪೋಷಕರಿಗೆ ಬಹು ದೊಡ್ಡ ಸವಾಲಾಗಿದೆ. ಇದಕ್ಕೆ ಕಾರಣ, ತಮ್ಮ ಮಕ್ಕಳು ಆಂಗ್ಲ ಭಾಷಾ ಮಾಧ್ಯಮದಲ್ಲಿ ಮತ್ತು ಅತ್ಯುತ್ತಮ ಎಂದು ಬಿಂಬಿಸಿರುವ ಖಾಸಗಿ ಶಾಲೆಗಳಲ್ಲಿಯೇ ಓದಬೇಕು. ಇದರ ಜೊತೆಗೆ ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಓದಿಸಿದರೆ ಭವಿಷ್ಯವೇ ಇಲ್ಲಾ ಎಂದು ವ್ಯವಸ್ಥಿತವಾಗಿ ನಂಬಿಸಿರುವುದನ್ನು ನಾವು ಒಪ್ಪದಿದ್ದರೂ ವಾಸ್ತವದ ಸಂಗತಿಗಳಾಗಿವೆ.

ಇಂತಹ ಸಂದರ್ಭದಲ್ಲಿ ನಮ್ಮ ಮಗನನ್ನು ಕನ್ನಡ ಮಾಧ್ಯಮ ಹಾಗೂ ಸರ್ಕಾರಿ ಶಾಲೆಯಲ್ಲಿ ಓದಿಸಬೇಕೆಂದು ನನ್ನ ಹಾಗೂ ನನ್ನ ಬಾಳಸಂಗಾತಿಯು ಒಮ್ಮತದ ನಿರ್ಧಾರ ಮಾಡಿದೆವು. ಯಾಕೆ ಸರ್ಕಾರಿ ಶಾಲೆ? ಯಾಕೆ ಕನ್ನಡ ಮಾಧ್ಯಮ?ನನಗಂತೂ ಕಾರಣ ಹಲವು. ಆದರೆ ನಮ್ಮ ಮಗು ಒತ್ತಡ ರಹಿತವಾಗಿ, ಆನಂದದಿಂದ ಹಾಗೂ ಗುರಿ ರಹಿತವಾಗಿ ಕಲಿಯಬೇಕೆಂಬುದು ನನ್ನ ಮಡದಿಯ ಏಕೈಕ ಬಯಕೆ. ಇದು ನನ್ನ ಸದ್ಯದ ಪುಣ್ಯ.

ಶಿಕ್ಷಣದ ರಾಷ್ಟ್ರೀಕರಣಕ್ಕೆ ಒತ್ತಾಯ ಮಾಡುತ್ತಿದ್ದ ಪ್ರೊ. ಅನಿಲ್ ಸದ್ಗೋಪಲ್ ರವರ ಎಂಬ ಸಂಘಟನೆ ALL INDIA FORUM FOR RIGHT TO EDUCATION ಚೆನ್ನೈ ನಲ್ಲಿ ಅಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನಕ್ಕೆ ನಾವುಗಳು ಹಾಜರಾದ ಕಾರಣ ಸರ್ಕಾರಿ ಶಾಲೆಗಳನ್ನು ಉಳಿಸಬೇಕೆಂಬ ನಿರ್ಧಾರ ಮತ್ತಷ್ಟು ದೃಢವಾಯಿತು. ತಕ್ಷಣವೇ ನಾವೆಲ್ಲಾ ಈ ಸಮಸ್ಯೆಗಳಿಗೆ ಪ್ರಾಯೋಗಿಕವಾಗಿಯೇ ಸ್ಪಂದಿಸಬೇಕೆಂದು ನಿರ್ಧರಿಸಿ ೨೦೧೪ ರ ಡಿಸೆಂಬರ್ ನಲ್ಲಿ ಆಗಿನ ಬಿ ಇ ಓ ಜವರೇಗೌಡ ರನ್ನು ಸಂಪರ್ಕಿಸಿದೆವು. ಅವರಿಂದ ಸಕಾರಾತ್ಮಕ ಸ್ಪಂದನೆ ದೊರೆತ ಬಳಿಕ,ಇದಕ್ಕೆ ಸಮುದಾಯದ ಬೆಂಬಲ ಅಗತ್ಯವೆಂದು ಸಮಾನ ಶಿಕ್ಷಣಾಸಾಕ್ತರು ಹಾಗೂ ಆಗಿನ ಪಾಂಡವಪುರ ಉಪವಿಭಾಗಾಧಿಕಾರಿಗಳಾದ ಡಾ. ಎಚ್ ನಾಗರಾಜುರವರ ಬೆಂಬಲ ಕೋರಿದೆವು. ನಂತರವೇ ನಮ್ಮ ಪ್ರಯೋಗಕ್ಕೆ . ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ಟೌನ್‌ನ ಸರ್ಕಾರಿ ಮಾದರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯನ್ನು ಆರಿಸಿಕೊಂಡೆವು.

ಈ ಶಾಲೆಯು ಶತಮಾನದ ಹಿಂದೆ ಅಂದರೆ ೧೯೧೦ ರಲ್ಲಿ ಕೆ ಆರ್ ಪೇಟೆ ಪಟ್ಟಣದ ದೊಡ್ಡನಿಂಗೇಗೌಡ ಎಂಬುವರ ಮನೆಯ ಜಗುಲಿ ಮೇಲೆ ಪ್ರಾರಂಭಗೊಂಡು ನಂತರ ೧೯೧೨ ರಲ್ಲಿ ನಂಜುಗೌಡ ಎಂಬುವರು ೬ ಎಕರೆ ೩೧ ಗುಂಟೆ ಜಮೀನನ್ನೂ ದಾನವಾಗಿ ನೀಡಿದ ನಂತರ ಸ್ಥಳಾಂತರಗೊಂಡು ಕೆ.ಆರ್. ಪೇಟೆ ಪಟ್ಟಣ ಹಾಗೂ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಅಕ್ಷರ ಜ್ಞಾನದ ದಾಹವನ್ನೂ ಹಿಂಗಿಸಿದೆ. ಆದರೆ ಕಳೆದ ೧೦–೧೫ ವರ್ಷಗಳ ಹಿಂದಿನವರೆಗೂ ವಿದ್ಯಾರ್ಥಿಗಳಿಂದ ತುಂಬಿತುಳುಕುತ್ತಿದ್ದ (ಒಟ್ಟು ೮೦೦ ಕ್ಕಿಂತ ಹೆಚ್ಚು) ಈ ಶಾಲೆಯು ಖಾಸಗಿ ಶಾಲೆಗಳ ಲಾಬಿ, ಪೋಷಕರ ಆಂಗ್ಲ ಭಾಷಾ ಮಾಧ್ಯಮದ ವ್ಯಾಮೋಹ ಹಾಗೂ ಸರ್ಕಾರದ ನಿರ್ಲಕ್ಷ್ಯಗಳಿಂದ

ನಲುಗಿಹೋಗಿ ೨೦೧೪-೧೫ ನೇ ಸಾಲಿನಲ್ಲಿ ಮಕ್ಕಳ ಸಂಖ್ಯೆ ೧೫೦ಕ್ಕೆ ಕುಸಿದಿತ್ತು. ನಾವು ಆ ಶಾಲೆಗೆ ಭೇಟಿ ನೀಡಿದಾಗ ನಮಗೆ ಕಂಡಿದ್ದು ಶತಮಾನವನ್ನು ಪೂರೈಸಿರುವ ಕಟ್ಟಡ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಸಾಲು ಸಾಲು ಕೊಠಡಿಗಳು.

ಕೇವಲ ೧೫೦ ಮಕ್ಕಳಿದ್ದ ಕಾರಣ ಕೆಲವೇ ಕೊಠಡಿಗಳನ್ನೂ ಮಾತ್ರ ಬಳಸಿಕೊಂಡು ಉಳಿದವುಗಳಲ್ಲಿ ಅಂಗನವಾಡಿಗೆ, ಶಿಕ್ಷಣ ಇಲಾಖೆಯ ಬಟ್ಟೆ ಹಾಗೂ ಪುಸ್ತಕಗಳನ್ನೂ ದಾಸ್ತಾನು ಮಾಡಿಕೊಳ್ಳಲು ಬಳಸಿಕೊಂಡು ಉಳಿದ ಕೊಠಡಿಗಳಿಗೆ ಬೀಗ ಜಡಿಯಲಾಗಿತ್ತು.

ಹಾಗೆಯೇ, ಶಿಕ್ಷಕರ ಸಂಖ್ಯೆಯೂ ಕೂಡ ೧೬ ರಿಂದ ೬ ಕ್ಕೆ ಇಳಿದಿತ್ತು. ಇಂತಹ ದುಸ್ಥಿತಿಯಲ್ಲಿ ಎಸ್ ಡಿ ಎಂ ಸಿ , ಶಿಕ್ಷಕವೃಂದ ಹಾಗೂ ಸಮಾನ ಶಿಕ್ಷಣಾಸಕ್ತರ ಜೊತೆ ೨೦೧೫ ರ ಜನವರಿ ಮೊದಲ ವಾರದಲ್ಲಿ ಒಂದು ಪೂರ್ವಭಾವಿ ಸಭೆ ಏರ್ಪಡಿಸಿದೆವು. ಶಾಲೆಯ ಸಮಸ್ಯೆಗಳ ಬಗ್ಗೆ ಚರ್ಚಿಸಿ ಈ ಕೆಳಕಂಡ ತೀರ್ಮಾನಗಳನ್ನೂ ತೆಗೆದುಕೊಳ್ಳಲಾಯಿತು.

೧) ಶಾಲಾ ದಾಖಲಾತಿ ಹೆಚ್ಚಿಸಲು ಎಸ್ ಡಿ ಎಂ ಸಿ ಗಿರುವ ವಿಶೇಷ ಅಧಿಕಾರವನ್ನು ಬಳಸಿ ೨೦೧೫-೧೬ ನೇ ಸಾಲಿನಿಂದಲೇ ಪೂರ್ವ ಪ್ರಾಥಮಿಕ ತರಗತಿಗಳ (ಎಲ್ ಕೆ ಜಿ & ಯುಕೆಜಿ) ಮಕ್ಕಳ ಮನೆ ವಿಭಾಗವನ್ನೂ ಪ್ರಾರಂಭಿಸಲು ನಿರ್ಧಾರ ಮಾಡಲಾಯಿತು. ಆದರೆ ಇದಕ್ಕೆ ಸರ್ಕಾರದ ಯಾವುದೇ ಅನುದಾನ ಲಭ್ಯವಿಲ್ಲದ ಕಾರಣ ಇದಕ್ಕೆ ತಗಲುವ ವೆಚ್ಚವನ್ನೂ ಭರಿಸಲು ದಾನಿಗಳು ಹಾಗೂ ಈ ಶಾಲೆಯ ಹಿರಿಯ ವಿದ್ಯಾರ್ಥಿಗಳ ನೆರವನ್ನು ಪಡೆಯುಲು ತೀರ್ಮಾನಿಸಲಾಯಿತು.

೨) ಅದೇ ತಿಂಗಳ ೧೪ ನೆಯ ದಿನಾಂಕದಂದು ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಮಾವೇಶವನ್ನೂ ನಡೆಸಿ ಈಗಾಗಲೇ ತನ್ನ ಹುಟ್ಟೂರಾದ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಮಾದಹಳ್ಳಿಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ (ಮಕ್ಕಳ ಮನೆ) ಪ್ರಯೋಗವನ್ನೂ ಮಾಡಿ ಕೇವಲ ೨೨ ಇದ್ದ ಮಕ್ಕಳ ಸಂಖ್ಯೆಯನ್ನೂ ೧೫೨ ಕ್ಕೆ ಏರಿಸಿ ಯಶಸ್ವಿಯಾಗಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಭೂಮಿಗೌಡರವರನ್ನೂ ಕರೆಸಿ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಪೂರ್ವ ಪ್ರಾಥಮಿಕ ತರಗತಿಗಳು ಹೇಗೆ ಪೂರಕವೆಂದು ತಿಳಿಸಿ, ಹಿರಿಯ ವಿದ್ಯಾರ್ಥಿಗಳ ಸಹಕಾರ ಕೋರಲಾಯಿತು. ಅದೇ ಸಭೆಯಲ್ಲಿ ದಾನದ ರೂಪದಲ್ಲಿ ಹಣ ಹಾಗೂ ಇನ್ನಿತರ ವಸ್ತುಗಳನ್ನು ಸಂಗ್ರಹಿಸಲು ಮತ್ತು ಸಾರ್ವಜನಿಕ ಸಂಪರ್ಕ ಏರ್ಪಡಿಸಲು ಅನುಕೂಲ ವಾಗುವಂತೆ ಶಾಲಾ ಉನ್ನತೀಕರಣ ಸಮಿತಿಯನ್ನೂ ರಚಿಸಲಾಯಿತು. ಈ ನಮ್ಮ ಕೆಲಸಕ್ಕೆ ಬೆನ್ನೆಲುಬಾಗಿ ನಿಂತಿದ್ದ ಡಾ. ಎಚ್ ಎಲ್ ನಾಗರಾಜುರವರನ್ನೂ ಅಧ್ಯಕ್ಷರಾಗಿ, ಬಿ ಇ ಓ ಜವರೇಗೌಡರನ್ನೂ ಕಾರ್ಯದರ್ಶಿಯಾಗಿ ಮತ್ತು ಶಾಲೆಯ ಹಿರಿಯ ವಿದ್ಯಾರ್ಥಿಯಾದ ಕೆ ಎಸ್ ಸೋಮಶೇಖರ್ ರವರನ್ನೂ ಖಜಾಂಚಿಗಳಾಗಿ ಆಯ್ಕೆ ಮಾಡಿ, ನನ್ನನ್ನು ಸಂಚಾಲಕರಾಗಿ ನೇಮಿಸಲಾಯಿತು.

ಆ ಸಮಾವೇಶದಲ್ಲೇ ಡಾ ಎಚ್ ಎಲ್ ನಾಗರಾಜುರವರು ಅವರ ಒಂದು ತಿಂಗಳ ವೇತನವನ್ನೂ ನಮ್ಮ ಶಾಲೆಗೆ ದಾನದ ರೂಪದಲ್ಲಿ ನೀಡುವ ಮೂಲಕ ಎರಡು ಲಕ್ಷ ರೂಗಳನ್ನು ದಾನದ ರೂಪದಲ್ಲಿ ಸಂಗ್ರಹಿಸಿದರು.

೧) ಪ್ರಾಥಮಿಕ ಶಿಕ್ಷಣದಲ್ಲಿ ಗಂಡು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಗಳಿರುವುದು ಅವೈಜ್ಞಾನಿಕ ಎಂದು ಭಾವಿಸಿ ಈವರೆಗೆ ಬರಿ ಬಾಲಕರ ಶಾಲೆಯಾಗಿದ್ದ ಈ ಶಾಲೆಯನ್ನೂ ಸಹ ಶಿಕ್ಷಣದ ಶಾಲೆಯನ್ನಾಗಿ ಪರಿವರ್ತಿಸಿ ಹೆಣ್ಣು ಮಕ್ಕಳಿಗೂ ಪ್ರವೇಶಾವಕಾಶವನ್ನು ಕಲ್ಪಿಸಿಕೊಡಲಾಯಿತು.

೨) ನಮ್ಮದು ಕನ್ನಡ ಮಾಧ್ಯಮ ಶಾಲೆ ಹಾಗೂ ಮಾತೃ ಭಾಷಾ ಕಲಿಕಾ ಮಾಧ್ಯಮ ಶಾಲೆ. ಆದರೆ ಪೋಷಕರಿಗೆ ಹುಚ್ಚು ಹಿಡಿಸಿರುವ ಇಂಗ್ಲಿಷ್ ಅನ್ನೂ ಒಂದು ಭಾಷೆಯಾಗಿ ಪರಿಣಾಮಕಾರಿಯಾಗಿ ಕಲಿಸಲಾಗುತ್ತದೆ ಎಂದು ಪೋಷಕರಿಗೆ ಮನವರಿಕೆ ಮಾಡಿ ಕನ್ನಡದಲ್ಲಿ ಸಂವೇದನೆ ಮತ್ತು ಇಂಗ್ಲಿಷ್‌ನಲ್ಲಿ ಕೂಡ ಒತ್ತಡವಿಲ್ಲದೆ ಸಂವಹನ ಮಾಡುವ ಮಟ್ಟಕ್ಕೆ ಕಲಿಸುತ್ತೇವೆ ಎಂದು ತಿಳಿಸಲಾಯಿತು.

೩) ಇತ್ತೀಚಿಗೆ ತಮ್ಮ ಮಕ್ಕಳು ಅಂದವಾದ ಹಾಗೂ ಆಕರ್ಷಕವಾದ ಸಮವಸ್ತ್ರವನ್ನೂ ಧರಿಸಬೇಕೆಂಬುದು ಪೋಷಕರ ಇಚ್ಚೆಯಾಗಿದೆ . ಆದರೆ ಸರ್ಕಾರ ನೀಡುತ್ತಿರುವ ಸಮವಸ್ತ್ರ ಕಳಪೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯ ಹೀಗಾಗಿ ಪ್ರಸ್ತುತ ೨೦೧೪-೧೫ ನೆಯ ಸಾಲಿನಲ್ಲಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ೧೩೦ ಮಕ್ಕಳಿಗೆ ದಾನದ ರೂಪದಲ್ಲಿ ಸಂಗ್ರಹಿಸಿದ ೧ ಲಕ್ಷ ರೂಗಳ ವೆಚ್ಚದಲ್ಲಿ ಆಕರ್ಷಕ ಬಟ್ಟೆಗಳನ್ನೂ ಒದಗಿಸಿ ಮತ್ತು ಶಾಲಾ ಕಟ್ಟಡಕ್ಕೆ ೨ ಲಕ್ಷ ರೂಗಳ ವೆಚ್ಚದಲ್ಲಿ ಆಕರ್ಷಕ ಬಣ್ಣವನ್ನೂ ಹಚ್ಚುವ ಮೂಲಕ ಇದು ಈಗ ಬದಲಾಗುತ್ತಿರುವ ಶಾಲೆ ಎಂದು ಪಟ್ಟಣದ ಬೀದಿ ಬೀದಿಗಳಲ್ಲಿ ಕರಪತ್ರಗಳ ಮೂಲಕ ಪ್ರಚಾರ ಮಾಡಿ ಮಕ್ಕಳನ್ನೂ ನಮ್ಮ ಶಾಲೆಗೆ ದಾಖಲು ಮಾಡಬೇಕೆಂದು ಕೋರಲಾಯಿತು.

ಇದೇ ಸಂದರ್ಭದಲ್ಲಿ ಸಮಾನ ಶಾಲೆಗಳು ಹಾಗೂ ಸರ್ಕಾರಿ ಶಾಲೆಗಳ ಮಹತ್ವವನ್ನೂ ಕೂಡ ಶಿಕ್ಷಕರಿಗೆ, ಸರ್ಕಾರಿ ನೌಕರರಿಗೆ ಹಾಗೂ ಆರ್ಥಿಕವಾಗಿ ಸದೃಢವಾಗಿರುವರಿಗೆ ಸಾರ್ವಜನಿಕವಾಗಿ ಮತ್ತು ವೈಯಕ್ತಿಕವಾಗಿ ಮನವರಿಕೆ ಮಾಡಿಕೊಡಲಾಯಿತು.

ಈ ಮೇಲಿನ ನಮ್ಮ ಹೆಜ್ಜೆಗಳಿಗೆ ಸಾರ್ವಜನಿಕರು ಹಾಗೂ ಪೋಷಕರು ಯಾವ ರೀತಿ ಸ್ಪಂದಿಸುತ್ತಾರೆಂಬುದೇ ನಮಗೆ ಆ ಕ್ಷಣದ ಆತಂಕವಾಗಿತ್ತು. ಆದರೆ ಅವರ ಸ್ಪಂದನೆ ನಮ್ಮ ನಿರೀಕ್ಷೆಗಳನ್ನೇ ಮೀರಿಸಿತ್ತು. ಮೊದಲ ವರ್ಷವೇ (೨೦೧೫-೧೬) ನಮ್ಮ ಮಕ್ಕಳ ಮನೆ ವಿಭಾಗಕ್ಕೆ ೩೦ ರಿಂದ ೫೦ ಮಕ್ಕಳ ನಿರೀಕ್ಷೆ ಮಾಡಿದ್ದವು. ಆದರೆ, ಅದು ಎಲ್ ಕೆ ಜಿ ತರಗತಿಗೆ ೧೦೮ ಮತ್ತು ೯೧ ಯು ಕೆ ಜಿ ಗೆ ಮಕ್ಕಳು ದಾಖಲಾಗಿ ನಮಗೆಲ್ಲಾ ಅಚ್ಚರಿ ಮೂಡಿಸಿತು.

ನಂತರ ನಾನು ಮತ್ತು ಇನ್ನಿತರ ಶಿಕ್ಷಕರುಗಳು ತಮ್ಮ ಮಕ್ಕಳನ್ನೂ ೧ ನೆಯ ತರಗತಿಗೆ ದಾಖಲಿಸಿದ ಪರಿಣಾಮ ಒಟ್ಟು ೭೧ ಮಕ್ಕಳು ಪ್ರವೇಶ ಪಡೆಯುವುದರ ಮೂಲಕ ನಮ್ಮ ಉತ್ಸಾಹವನ್ನೂ ಇಮ್ಮಡಿಗೊಳಿಸಿತು. ಬೇರೆ ಬೇರೆ ತರಗತಿಗಳಿಗೂ ಕೂಡ ಖಾಸಗಿ ಶಾಲೆಗಳಿಂದ ಮಕ್ಕಳು ಬಂದರು. ಹೀಗಾಗಿ ೨೦೧೪-೧೫ ನೆಯ ಸಾಲಿನಲ್ಲಿ ಕೇವಲ ೧೩೦ ಇದ್ದ ಮಕ್ಕಳ ಸಂಖ್ಯೆ ಮಕ್ಕಳ ಮನೆಯ ವಿಭಾಗವೂ ಸೇರಿ ೫೦೮ ಕ್ಕೆ ತಲುಪಿತು. ಇದು ಪೋಷಕರು ಇನ್ನೂ ಸರ್ಕಾರಿ ಶಾಲೆಗಳ ಮೇಲಿನ ನಂಬಿಕೆಯನ್ನೂ ಕಳೆದಕೊಂಡಿಲ್ಲ ಅನ್ನುವುದನ್ನು ಖಾತ್ರಿಗೊಳಿಸಿತು. ಹೀಗೆ ಮಕ್ಕಳ

ಪ್ರವಾಹವೇ ಹರಿದುಬಂದು ನಮ್ಮ ಆಶಯಗಳನ್ನು ಕಾರ್ಯರೂಪಕ್ಕೆ ತರುವ ಜವಬ್ದಾರಿಯನ್ನು ಪರೀಕ್ಷೆಗೆ ಒಡ್ಡಿತು. ಪೂರ್ವ ಪ್ರಾಥಮಿಕ ತರಗತಿಗಳನ್ನು ನಾಲ್ಕು ವಿಭಾಗಗಳನ್ನು ಮಾಡಿ ನಾಲ್ಕು ಶಿಕ್ಷಕಿಯರು ಮತ್ತು ಎರಡು ಆಯಾಗಳು ಮತ್ತು ಒಬ್ಬರು ಕಾವಲುಗಾರರನ್ನೂ ಶಾಲಾ ಉನ್ನತೀಕರಣ ಸಮಿತಿಯ ವತಿಯಿಂದ ನೇಮಕ ಮಾಡಿಕೊಳ್ಳಲಾಯಿತು. ಇವರಿಗೆ ವೇತನ ಹಾಗೂ ಇನ್ನಿತರ ವೆಚ್ಚಗಳ ಭರಿಸಲು(ಸರ್ಕಾರದ ಯಾವುದೇ ಅನುದಾನವಿಲ್ಲದ ಕಾರಣ) ದಾನಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳು ಆ ವರ್ಷವೇ ೭ ಲಕ್ಷಕ್ಕಿಂತ ಹೆಚ್ಚು ಹಣ ಹಾಗೂ ಸುಮಾರು ೨ ಲಕ್ಷ ರೂಗಳ ಮೌಲ್ಯದ ಪೀಠೋಪಕರಣಗಳನ್ನು ಸಂಗ್ರಹಿಸಲಾಯಿತು.

ಇದರ, ಜೊತೆಗೆ ೧ ನೆಯ ತರಗತಿಯಿಂದ ೨ ನೆಯ ತರಗತಿಗಳವರೆಗೆ ಮಕ್ಕಳನ್ನೂ ೩೦ ರಿಂದ ೪೦ ಮಕ್ಕಳಿಗೆ ಒಂದರಂತೆ ವಿಭಾಗಗಳನ್ನೂ ಮಾಡಿ ಬಿ ಇ ಓ ಸಹಕಾರದಿಂದ ಹಾಲಿ ಇದ್ದ ಶಿಕ್ಷಕರ ಜೊತೆಗೆ ಇನ್ನೂ ಶಿಕ್ಷಕರನ್ನೂ ನಿಯೋಜಿಸಿ ಕೊಂಡು ತರಗತಿವಾರು ಹಾಗೂ ವಿಷಯವಾರು ಶಿಕ್ಷಕರನ್ನೂ ಒದಗಿಸಲಾಯಿತು. ಇಲ್ಲಿ ಮತ್ತೊಂದು ಮುಖ್ಯವಾದ ವಿಷಯ ಹೇಳಲೇಬೇಕು. ಅದೇನೆಂದರೆ ನಮ್ಮ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಯಾವುದೋ ಹೊಸ ಚೈತನ್ಯ ಮೈಗೂಡಿಸಿಗೊಂಡಂತೆ ವಿಶೇಷ ಸಮವಸ್ತ್ರ ಧರಿಸಿ ಅತ್ಯುತ್ಸಾಹದಿಂದ ತರಗತಿಗಳಿಗೆ ತೆರಳಲು ಆರಂಭಿಸಿದರು. ಅಲ್ಲದೆ, ಪ್ರತಿನಿತ್ಯ ಶಾಲಾವಧಿಯ ನಂತರ ಸಭೆ ಸೇರಿ ಪಠ್ಯ ಹಾಗೂ ಪಠ್ಯೇತರ ಚಟುವಟಿಗೆಗಳ ಬಗ್ಗೆ ಚರ್ಚಿಸಲಾರಂಭಿಸಿದರು. ತರಗತಿಗಳ ಒಳಗೆ, ಹೊರಗೆ ಮತ್ತು ಪೋಷಕರೊಂದಿಗೆ ಒಡನಾಟ ಇಟ್ಟುಕೊಂಡು ಪ್ರತಿಯೊಂದು ಮಕ್ಕಳ ಕಲಿಕೆ ಮಾತ್ರವಲ್ಲದೆ ಅವುಗಳ ಊಟ-ಉಪಚಾರ, ಸ್ವಚ್ಚತೆ, ಆಸಕ್ತಿ ಹಾಗೂ ಲವಲವಿಕೆಗಳ ಬಗ್ಗೆ ವಿಶೇಷ ಗಮನ ಹರಿಸಿದ ಕಾರಣ ಪೋಷಕರು ತಪ್ಪದೇ ಸಭೆಗಳಿಗೆ ಹಾಜರಾಗುವ ಹವ್ಯಾಸವನ್ನೂ ಬೆಳೆಸಿಕೊಂಡರು. ಈ ಪರಿಪಾಠ ಈಗಲೂ ಮುಂದುವರೆದಿರುವ ಕಾರಣ ಪ್ರತಿನಿತ್ಯ ಒಂದಲ್ಲಾ ವಿಷಯಗಳ ಬಗ್ಗೆ ಚರ್ಚಿಸಿಯೇ ಮನೆಗೆ ತೆರಳುತ್ತಾರೆ. ಇದು ನಮ್ಮ ಶಾಲೆಯ ಉನ್ನತಿಗೆ ಭದ್ರ ಬುನಾದಿಯಾಗಿದೆ.

ಇವುಗಳೆಲ್ಲದರ ಪರಿಣಾಮ ಸರ್ಕಾರದ ಅಥವಾ ಇಲಾಖೆಯ ಅಥವಾ ಮಕ್ಕಳ ಅಥವಾ ಪೋಷಕರ ಕಾರ್ಯಕ್ರಮಗಳಲ್ಲಿ ಕ್ಷಣಮಾತ್ರದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗುತ್ತದೆ. ಹೀಗಾಗಿಯೇ ಈ ಶಾಲೆಗೆ (ಶಿಕ್ಷಕರ ಬಗ್ಗೆ ಇನ್ನೂ ಆಳವಾಗಿಯೇ ಬೇರೂರಿರುವ) ಅಂಟಿದ್ದ ಕಳಂಕ ದೂರಮಾಡಿದೆ.

ಈ ನಮ್ಮ ಶಾಲೆಯ ಬದಲಾವಣೆಯ ಕೆಲಸಗಳನ್ನೂ ಪರಿಚಯಿಸಲು ಹಾಗೂ ಇತರ ಶಾಲೆಗಳನ್ನೂ ಈ ರೀತಿಯೇ ಸಾಗುವಂತೆ ಪ್ರೇರೇಪಿಸಲು ಮೊದಲ ವರ್ಷವೇ ಸಾಹಿತಿ ದೇವನೂರು ಮಹದೇವ ಮತ್ತು ಈಗಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಬಿ ಕೆ ಬಸವರಾಜುರವರ ಸಮ್ಮುಖದಲ್ಲಿ ತಾಲ್ಲೂಕಿನ ಎಲ್ಲಾ ಎಸ್ ಡಿ ಎಂ ಸಿ ಅಧ್ಯಕ್ಷ ಹಾಗೂ ಸದಸ್ಯರುಗಳ ಸಮ್ಮೇಳನ ನಡೆಸಿ ಅವರ ಜವಾಬ್ದಾರಿಯನ್ನೂ ತಿಳಿಸಲಾಯಿತು. ಇದರ ಪರಿಣಾಮ ತಾಲ್ಲೂಕಿನ ೧೦೦ ಕ್ಕಿಂತ ಹೆಚ್ಚು ಶಾಲೆಗಳು ನಮ್ಮ

ಒಡನಾಟಕ್ಕೆ ಬಂದವು. ಅದೇ ವರ್ಷದ ಕೊನೆಗೆ " ಮಕ್ಕಳ ಹಬ್ಬ -೧ " ಶೀರ್ಷಿಕೆಯಡಿಯಲ್ಲಿ ಶಾಲಾ ವಾರ್ಷಿಕೋತ್ಸವ ನೆಡೆಸಿ ಮಕ್ಕಳ ಪಠ್ಯ ಹಾಗೂ ಪಠ್ಯೇತರ ಕಲಿಕೆಗಳನ್ನೂ ಅನಾವರಣಗೊಳಿಸಲಾಯಿತು.

ಮೊದಲ ವರ್ಷದ ಬದಲಾವಣೆಯ ಹೆಜ್ಜೆಗಳು ಪೋಷಕರಲ್ಲಿ ಅಚ್ಚರಿ ಮೂಡಿಸಿದ ಕಾರಣ ಎರಡನೆಯ ವರ್ಷದ (೨೦೧೬-೧೭) ರಲ್ಲಿನ ದಾಖಲಾತಿ ತಲುಪಿತು. ಅದರಲ್ಲೂ ವಿಶೇಷವಾಗಿ ೧ ನೆಯ ತರಗತಿಗೆ ನಾವು ತೆರೆದಿದ್ದ ಪೂರ್ವ ಪ್ರಾಥಮಿಕ ತರಗತಿಗಳ ಪರಿಣಾಮ ಒಂದನೆಯ ತರಗತಿಗೆ ಮಕ್ಕಳ ದಾಖಲಾದವು. ಇದು ಇಡಿ ರಾಜ್ಯದಲ್ಲಿಯೇ ಸರ್ಕಾರಿ ಶಾಲೆಯೊಂದಕ್ಕೆ ಅತಿ ಹೆಚ್ಚು ದಾಖಲಾದ ಶಾಲೆ ಎಂಬ ಕೀರ್ತಿಗೆ ಪಾತ್ರವಾಯಿತು. ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ನಮ್ಮ ಶಾಲೆಗೆ ಬೇಟಿ ನೀಡಲಾರಂಭಿಸಿದರು. ಮೊದಲ ವರ್ಷಕ್ಕಿಂತಲೂ ಮತ್ತಷ್ಟು ಕ್ರಿಯಾಶೀಲವಾಗಿ ಒತ್ತಡ ರಹಿತ ಕಲಿಕೆಗೆ ಒತ್ತು ನೀಡುವುದರ ಜೊತೆಗೆ ಮಕ್ಕಳ ಸಾಮಾಜಿಕರಣಗೊಳಿಸುವ ಕಾರ್ಯಕ್ರಮಗಳಾದ "ಛದ್ಮವೇಷ" "ಮಕ್ಕಳ ಸಂತೆ" "ಮಕ್ಕಳ ಭಾಷಣ, ಚಿತ್ರಕಲೆ,ಸಂಗೀತ" "ಮೆಟ್ರಿಕ್ ಮೇಳ" " ಪೋಷಕರು - ಶಿಕ್ಷಕರು ಒಂದು ಆಪ್ತ ಸಂವಾದ" "ಪೋಷಕರ ಕ್ರೀಡಾ ಕೂಟ" "ಆಹಾರ ಮೇಳ" ಕೊನೆಗೆ "ಮಕ್ಕಳ ಹಬ್ಬ -೨ " ಆಯೋಜನೆ ಮಾಡಿ ಮಕ್ಕಳ ವಿಭಿನ್ನ ಅಭಿವ್ಯಕ್ತಿಗಳಿಗೆ ಪ್ರೋತ್ಸಾಹ ನೀಡಲಾಯಿತು.

ಹೀಗೆ ನಮ್ಮ ಶಾಲೆ ಬದಲಾವಣೆ ಪಥದಲ್ಲಿ ಸಾಗಿದ ಪರಿಣಾಮ. ಈ ಶೈಕ್ಷಣಿಕ (೨೦೧೭-೧೮)ಸಾಲಿನಲ್ಲಿ ೬೬೫ ಮಕ್ಕಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಹೀಗಾಗಿಯೇ ಕೆಲವೇ ಮಂದಿ ಸರ್ಕಾರಿ ಶಾಲೆಯೊಂದರ ಗತ ವೈಭವವನ್ನೂ ಮರಳಿ ತರಲು ಯತ್ನಿಸಿದ ಕಾರಣ ಕೇವಲ ಮೂರು ವರ್ಷದಲ್ಲಿ ಮಕ್ಕಳ ಸಂಖ್ಯೆ ೧೩೦ ರಿಂದ ೬೬೫ ಕ್ಕೆ ಏರುತ್ತದೆ ಮತ್ತು ಶಿಕ್ಷಕರ ಸಂಖ್ಯೆ ೬ ರಿಂದ ೧೯ ಕ್ಕೆ ಮುಟ್ಟಿದೆ ಎಂದರೆ ಅಚ್ಚರಿಯಲ್ಲದೆ ಇನ್ನೇನು!?

ಸರ್ಕಾರಿ ಶಾಲೆಗಳ ಉಳಿವಿಗೆ ಈ ಶಾಲೆಯೇ ಕೇಂದ್ರವಾಗಬೇಕೆಂಬ ಮಾತನ್ನೂ ಶಾಲೆಗೆ ಭೇಟಿ ನೀಡಿದ ಸಾಹಿತಿ ದೇವನೂರು ಮಹದೇವರವರು ವ್ಯಕ್ತಪಡಿಸಿದ್ದಾರೆ. ಇವರ ಊಹೆ ನಿಜ ಎಂಬಂತೆ ನಮ್ಮ ೮ ತಾಲ್ಲೂಕಿನಲ್ಲಿ , ಜಿಲ್ಲೆಯಲ್ಲಿ ೫೦ ಕ್ಕಿಂತ ಹೆಚ್ಚು ಮತ್ತು ರಾಜ್ಯದಲ್ಲಿ ೭೦೦ ಸರ್ಕಾರಿ ಶಾಲೆಗಳಲ್ಲಿಯೇ ಮಕ್ಕಳ ಮನೆ ವಿಭಾಗವನ್ನು ತೆರೆಯಲು ಪ್ರೇರೇಪಿಸಿದೆ.

ಕೊನೆಯದಾಗಿ, ಸಮಾನ ಶಿಕ್ಷಣಾಸಕ್ತರ ಒತ್ತಾಯಕ್ಕೆ ಮಣಿದು ನಮ್ಮ ರಾಜ್ಯ ಸರ್ಕಾರ ರಚಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಸ್. ಜಿ.ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸರ್ಕಾರಿ ಶಾಲಾ ಸಬಲೀಕರಣ ಸಮಿತಿಯೂ ಈ ನಮ್ಮ ಶಾಲೆಯಲ್ಲಿನ ಬದಲಾವಣೆ ಅಂಶಗಳನ್ನು ಬಹಳ ಗಂಭೀರವಾಗಿ ಗಮನಿಸಿ ಸರ್ಕಾರಿ ಶಾಲೆಗಳ ಉಳಿವಿಗೆ ಸರ್ಕಾರವೇ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಬೇಕು ಮತ್ತು ವಿಷಯವಾರು ಹಾಗೂ ತರಗತಿವಾರು ಶಿಕ್ಷಕರನ್ನೂ ಒದಗಿಸಬೇಕೆಂದಿರುವುದು ನಮ್ಮ ಪ್ರಯೋಗಕ್ಕೆ ಸಿಕ್ಕಿದ ಮನ್ನಣೆ ಎಂದು ಬಾವಿಸಿದ್ದೇವೆ.

ಭಾಷೆಯಲ್ಲಿ ನೈಸು-ಬಿರುಸು

-ರಹಮತ್ ತರೀಕೆರೆ

ಉತ್ತರ ಕರ್ನಾಟಕದ ತಿರುಗಾಟದಲ್ಲಿ ಕೆಲವರು ನನ್ನ ಮಾತುಕತೆಯನ್ನು ಕೇಳುತ್ತ 'ನಿಮ್ಮ ಮಾತು ನೈಸು. ನಮ್ಮದು ಬಿರುಸು' ಎನ್ನುವುದುಂಟು. ಹೀಗೆ ಹೇಳುವವರಲ್ಲಿ ಮಾತಲ್ಲಿ ಆಡುಮಾತಿನ ಪ್ರಾದೇಶಿಕ ರೂಪಗಳು ಹೆಚ್ಚಿರುತ್ತವೆ ಮತ್ತು ನನ್ನ ಮಾತುಕತೆಯಲ್ಲಿ ಬರಹದ ಶಿಷ್ಟತೆಯ ಪ್ರಮಾಣ ಹೆಚ್ಚಿರುತ್ತದೆ. ಪ್ರಶ್ನೆಯೆಂದರೆ, ತಮ್ಮ ವಾಗ್ರೂಪದ ಬಗ್ಗೆ ಈ ತಪ್ಪೊಪ್ಪಿಗೆಯ ಅಥವಾ ಕೀಳರಿಮೆಯ ದನಿಯಾಕೆ ಕಾಣಿಸಿಕೊಳ್ಳುತ್ತದೆ. ಈ ಕೀಳರಿಮೆ ಕನ್ನಡಕ್ಕೆ ಸೀಮಿತವಲ್ಲ, ಪ್ರಾದೇಶಿಕ ರೂಪಭೇದಗಳನ್ನು ಆಡುವ ಎಲ್ಲ ಭಾಷಿಕ ಸಮುದಾಯಗಳಲ್ಲೂ ಇದೆ. ಲಖನೊ-ದೆಹಲಿಯ ಉರ್ದುರೂಪಗಳು ಶ್ರೇಷ್ಠವೆಂಬ ನಂಬಿಕೆ ಭಾರತದ ಉಳಿದ ಪ್ರಾಂತ್ಯದ ಭಾಷಿಕರಲ್ಲಿದೆ. ಅದರ ಮುಂದೆ ಹೈದರಾಬಾದಿನ 'ದಖನಿ' ಉರ್ದುವಂತೆ, ಸಿರಿವಂತರ ಮದುವೆಗೆ ಬಂದಿರುವ ಬಡವರ ತರಹ ಮುದುಡಿಕೊಳ್ಳುತ್ತದೆ. ತೆಲಂಗಾಣದ ತೆಲುಗು 'ಒರಟು' ಎಂಬ ಧೋರಣೆ ವಿಜಯವಾಡಾ-ಗೋದಾವರಿ ಭಾಗದವರಲ್ಲಿದೆ. ತೆಲುಗು ಸಿನಿಮಾಗಳಲ್ಲಿ ಯಜಮಾನಿಕೆ ಮಾಡುತ್ತಿರುವುದು ಇದೇ ಕರಾವಳಿಯ 'ನೈಸು' ತೆಲುಗು. ಸಿನಿಮಾಗಳು ತೆಲಂಗಾಣದ ನಟರನ್ನಿಟ್ಟುಕೊಂಡು ಹೈದರಾಬಾದ್ ಸ್ಟುಡಿಯೊಗಳಲ್ಲಿ ತಯಾರಾದರೂ, ವಿಜಯವಾಡ ಸೀಮೆಯ ಉಚ್ಚಜಾತಿಗಳಾಡುವ ಸಂಸ್ಕೃತಭೂಯಿಷ್ಠ ತೆಲುಗನ್ನೇ ಬಳಸುತ್ತವೆ; ತಮಿಳು ಮಲೆಯಾಳ ವಿಷಯದಲ್ಲೂ ಇಂತಹ ಪ್ರಾದೇಶಿಕ ಶ್ರೇಣೀಕರಣ ಭಾವವಿದೆ. ತಿರುವನಂತಪುರದ ನಂಬೂದಿರಿಗಳ ಮಲೆಯಾಳವು ಮಿಗಿಲಾದುದೆಂಬ ಅಭಿಪ್ರಾಯ ಅಲ್ಲಿ ರೂಢವಾಗಿದೆ; ಪುಣೆಯ ಮರಾಠಿ ಶುದ್ಧವೆಂದೂ ವಿದರ್ಭದ ಅಥವಾ ಕೊಂಕಣದ ಮರಾಠಿಗಳು ಬೆರಕಿಯೆಂದೂ ಮಹಾರಾಷ್ಟ್ರಿಗರ ಗ್ರಹಿಕೆಯಿದೆ. ಬಹುಶಃ ಈ ತಾರತಮ್ಯ ಪ್ರಜ್ಞೆ ಅಖಿಲ ಭಾರತೀಯವಾಗಿದೆ. ಇದೊಂದು ಭಾಷಿಕ ಬೇನೆ.

ತೊಗಲುಬೊಂಬೆ ಕಲಾವಿದ ಬೆಳಗಲ್ಲು ವೀರಣ್ಣನವರ ಜತೆಗೊಮ್ಮೆ ಕುಳಿತ್ತಿದ್ದೆ. ಮಾತುಕತೆ ನಡುವೆ ಮನೆಯವರ ಫೋನು ಬರಲು, ಅವರು ಮರಾಠಿಯಲ್ಲಿ ಮಾತಾಡಿದರು. ಮಾತು ಮುಗಿದ ಬಳಿಕ ನನ್ನತ್ತ ಹುಳ್ಳಗೆ ನೋಡಿ 'ನಮ್ಮದು ಒರಟು ಮರಾಠಿ' ಎಂದರು. ಈ 'ಒರಟು'ತನವು, ಪ್ರಕೃತಿಗೆ ಹತ್ತಿರವಾಗಿದ್ದು ಮೂಲರೂಪವನ್ನು ಗ್ರಾಮೀಣ ಜೀವಂತಿಕೆಯನ್ನು ಉಳಿಸಿಕೊಂಡಿರುವ ಎಂಬರ್ಥವಿದ್ದರೆ ಚಿಂತೆಯಿಲ್ಲ. ಅಸೂಕ್ಷ್ಮ ಕಲಬೆರಕೆ ಎಂಬರ್ಥವಿದ್ದರೆ ಸಮಸ್ಯೆ. ಕರ್ನಾಟಕದ ಗೋಸಂಗಿ, ಹಕ್ಕಿಪಿಕ್ಕಿ, ಬುಡ್ಗ, ಜಂಗಮ ಕಿಳ್ಳೇಕ್ಯಾತ ಮುಂತಾದ ಅಲೆಮಾರಿ ಕಲಾವಿದ ಸಮುದಾಯಗಳ ಮನೆಮಾತು ಸಹ ಮರಾಠಿ. ಈ ಸಮುದಾಯಗಳು ಮಹಾರಾಷ್ಟ್ರದಿಂದ ಯಾವಾಗ ಯಾಕಾಗಿ ಗುಳೆ ಬಂದವೊ ತಿಳಿಯದು. ಬಹುಕಾಲ ಕರ್ನಾಟಕದೊಳಗಿದ್ದ ಕಾರಣ, ತಮ್ಮದೇ ಆದ ಕನ್ನಡ ಮಿಶ್ರಿತ ಮರಾಠಿಯನ್ನು ರೂಪಿಸಿಕೊಂಡಿವೆ. ಈ ಮರಾಠಿಯು ಕನ್ನಡ-ತೆಲುಗು ಪ್ರದೇಶದಲ್ಲಿ ಬೆಳೆದಿರುವುದರಿಂದ ಸಹಜವಾಗಿ ದಟ್ಟ ದ್ರಾವಿಡತನದಿಂದ ಕೂಡಿದೆ. ಅದಕ್ಕಾಗಿ ಅವರು ಅದನ್ನು ಬಿರುಸೆಂದು ನಿರೀಕ್ಷಣ ಜಾಮೀನು ಅರ್ಜಿ ಹಾಕಿಕೊಳ್ಳುವುದರ ಅಗತ್ಯವೇನಿದೆ? ಎಲ್ಲ ಭಾಷಿಕ ಮುಜುಗರಗಳ ಹಿಂದೆ ಉತ್ಕೃಷ್ಟತೆಯ ಮಾದರಿಯೊಂದು ಕಣ್ಮುಂದೆ ಮೌಲ್ಯಮಾಪಕ ಅಧಿಕಾರದಲ್ಲಿ ನಿಂತಿರುತ್ತದೆ.

ಜನ ತಮ್ಮ ನುಡಿ ಒರಟೆಂದು ಪರಿಭಾವಿಸಲು ವರ್ಗವೂ ಒಂದು ಕಾರಣ. ಚಲನಚಿತ್ರಗಳಲ್ಲಿ ತಮಾಶೆಗಾಗಿ ಬಳಕೆಯಾಗುವುದಕ್ಕೂ ಉತ್ತರ ಕರ್ನಾಟಕವು ರಾಜಕೀಯ

ಅಧಿಕಾರ, ಸಂಪತ್ತಿನ ಹಂಚಿಕೆ, ಆಧುನಿಕತೆ ವಿಷಯದಲ್ಲಿ ಹಿಂದುಳಿದಿರುವುದಕ್ಕೂ ಸಂಬಂಧವಿದೆ. ಇಂಗ್ಲೀಶ್ ಮಾತಾಡುವ ಸಮುದಾಯಗಳಲ್ಲಿ, ಪದಬಳಕೆ, ವಾಕ್ಯರಚನೆ, ಉಚ್ಚಾರಣ ರೀತಿಯಲ್ಲಿರುವ ಭೇದಗಳು ಸೃಷ್ಟಿಸಿರುವ ತಾರತಮ್ಯಗಳು ಅನಂತ. ಅಮೆರಿಕೆಯಲ್ಲಿ ಕಪ್ಪುಜನ ಮಾತಾಡುವ ಇಂಗ್ಲೀಶನ್ನು ಕೆಟ್ಟದೆಂದು ಬಿಳಿಯರು ವ್ಯಂಗ್ಯ ಮಾಡುವರಂತೆ. ಭಾರತದಲ್ಲೇ ಬಿಹಾರಿಗಳ (ಭೋಜಪುರಿ) ಅಥವಾ ಕೇರಳಿಗರ ಇಂಗ್ಲೀಶ್ ಉಚ್ಚಾರಗಳನ್ನು ಕುರಿತು ಎಷ್ಟೊಂದು ಜೋಕುಗಳಿವೆ. ತಮ್ಮ ಇಂಗ್ಲೀಶ್ ಉಚ್ಚಾರಣೆಗಾಗಿ ಸ್ವತಃ ಆಂಗ್ಲ ಪ್ರಾಧ್ಯಾಪಕರೆ ಅಪಮಾನಿತರಾದ ಸನ್ನಿವೇಶಗಳನ್ನು ಅವರ ಆತ್ಮಕತೆಗಳು ಹೇಳುತ್ತವೆ.

ನಮ್ಮದು ಬಹುಸಾಂಸ್ಕೃತಿಕ ಬಹುಭಾಷಿಕ ಬಹುಧಾರ್ಮಿಕ ದೇಶವೆಂದೂ, ಏಕಸಂಸ್ಕೃತಿ ಏಕಧರ್ಮ ಏಕಭಾಕ ದೇಶಗಳಲ್ಲಿಲ್ಲದ ವೈವಿಧ್ಯ ಮತ್ತು ಕೂಡುಬಾಳುವೆ ಇಲ್ಲಿದೆಯೆಂದೂ ಅಭಿಮಾನದಿಂದ ಕೊಂಡಾಡುತ್ತೇವೆ. ಆದರೆ ಬಾಹುಳ್ಯ ಮತ್ತು ವೈವಿಧ್ಯದ ಒಳಗೆ ಕ್ರಿಯಾಶೀಲವಾಗಿರುವ ತಾರತಮ್ಯಗಳನ್ನು ಮರೆಮಾಚುತ್ತೇವೆ. ಪಾಕಿಸ್ತಾನದ ಉರ್ದು ಹಾಗೂ ಬಾಂಗ್ಲಾದೇಶದ ಬಂಗಾಳಿಗಳ ಪ್ರಾದೇಶಿಕ ಭಿನ್ನತೆಗಳಲ್ಲೂ ಇಂತಹವೇ ತಾರತಮ್ಯಗಳಿವೆ. ಶ್ರೇಣೀಕರಣವು ಉಪಖಂಡದ ಸಾಮಾಜಿಕ ಧಾರ್ಮಿಕ ಬದುಕಿನ ನೆತ್ತರೊಳಗೇ ಸೇರಿಹೋದಂತಿದೆ. ಅದರ ಝಳ ಭಾಷೆಯ ಮೂಲಕ ಮುಖದೋರುತ್ತಿದೆ.

ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲೂ ಉಚ್ಚಜಾತಿ, ಮೇಲ್ವರ್ಗ, ನಗರವಾಸಿ, ಆಧುನಿಕರು, ಅಕ್ಷರಸ್ಥರು, ಅಧಿಕಾರ ಕೇಂದ್ರಕ್ಕೆ ಸಮೀಪ ಇರುವವರು ಆಡುವ ಭಾಷಿಕ ರೂಪ ಮತ್ತು ಉಚ್ಚಾರಗಳು ಶ್ರೇಷ್ಠವೆಂದು ಪರಿಗಣಿತವಾಗಿರುತ್ತವೆ. ಕೆಳಜಾತಿ, ಕೆಳವರ್ಗ, ಗ್ರಾಮೀಣ, ಅನಾಧುನಿಕ ಹಾಗೂ ಹಿಂದುಳಿದ ಪ್ರದೇಶದ ಜನರು ತಮ್ಮ ಭಾಷೆಗೆ ಮಾತ್ರವಲ್ಲ, ಸಂಸ್ಕೃತಿ ಉಡುಪು ಆಹಾರಗಳನ್ನು ಕೀಳ್ಗಳೆವ ಸಿದ್ಧಾಂತಗಳಿಗೆ ಸಮ್ಮತಿ ಕೊಟ್ಟಿರುತ್ತಾರೆ. ಭಾಷಾವಿಜ್ಞಾನದ ಪ್ರಕಾರ ಭಾಷೆಯಲ್ಲಿ ಒರಟು-ನೈಸು, ಶ್ರೇಷ್ಠ-ಕನಿಷ್ಠ ಎಂಬುದು ಇರುವುದಿಲ್ಲ. ಒಂದೇ ಭಾಷೆ ಬೇರೆಬೇರೆ ಚಾರಿತ್ರಿಕ ಸಾಮಾಜಿಕ ಭೌಗೋಳಿಕ ಕಾರಣಗಳಿಂದ ಬಹುರೂಪಧಾರಣೆ ಮಾಡುವುದನ್ನು ಅದು ವಿವರಿಸುತ್ತದೆ. ಆದರೆ, ಚಾರಿತ್ರಿಕ ಒತ್ತಡಗಳಿಂದ ಹುಟ್ಟುವ ಈ ಬಹುತ್ವದೊಳಗೆ ಅಡಗಿರುವ ಭೇದಪ್ರಜ್ಞೆಯ ದೆಸೆಯಿಂದ, ಅದರ ರೂಪಗಳಲ್ಲಿರುವ ಶ್ರೇಷ್ಠ ಮತ್ತು ಕೀಳು ಭಾವವು ಚಾಲ್ತಿಗೆ ಬಂದುಬಿಡುತ್ತದೆ. ಈ ಭೇದಕ್ಕೆ ಕಾರಣ, ಭಾಷಿಕ ರೂಪದೊಳಗಿನ ಪದರಚನೆ ವಾಕ್ಯರಚನೆಗಳಲ್ಲ. ಅವನ್ನಾಡುವ ಜನರ ಹಿನ್ನೆಲೆಗಳು. ಶ್ರೇಷ್ಠವೆಂದೂ ನೈಸೆಂದೂ ಭಾವಿಸಲಾದ ರೂಪವು, 'ಕೆಳ' 'ಒರಟು' 'ಅಶುದ್ಧ' ಎನಿಸಿಕೊಂಡಿರುವುದನ್ನು ಗೇಲಿ ಮಾಡುತ್ತದೆ. ಧಾರವಾಡ ಅಥವಾ ಮಂಗಳೂರು ಕನ್ನಡವು ಬೆಂಗಳೂರು ಕೇಂದ್ರಿತ ಸಿನಿಮಾಗಳಲ್ಲಿ ಬಹಕಾಲ ಹಾಸ್ಯಪಾತ್ರಗಳಲ್ಲಿ ಬಳಕೆಯಾಗುತ್ತಿತ್ತು. ಆದರೆ ಈಗೀಗ ಧಾರವಾಡ ಕನ್ನಡದಲ್ಲಿ ಸಿನಿಮಾ ಸೀರಿಯಲ್ಲು ತಯಾರಾಗುತ್ತಿವೆ. ಆದರೆ ಅಲ್ಲೆಲ್ಲೂ ಮೈಸೂರು ಕನ್ನಡವನ್ನು ತಮಾಶೇಗಾಗಿ ಬಳಸಿಕೊಂಡಿರುವ ನಿದರ್ಶನಗಳಿಲ್ಲ. ಬಹುಶಃ ಸಂಸ್ಕೃತಭೂಯಿಷ್ಠ ಅಧಿಕೃತ ಹಿಂದಿಯ ಅಹಮಿಕೆ ಮತ್ತು ಕೃತಕತೆಯನ್ನು ಗೇಲಿಮಾಡುವ 'ಚುಪ್ಕೆಚುಪ್ಕೆ' ತರಹದ ಚಿತ್ರಗಳು ಕನ್ನಡದಲ್ಲಿ ಬಂದಿಲ್ಲ.

ಜನರನ್ನು, ಅವರ ಜಾತಿ ಪ್ರದೇಶ ಧರ್ಮ ವೃತ್ತಿ ಭಾಷೆಗಳ ನೆಲೆಯಿಂದ ಕೀಳರಿಮೆಗೊಳಿಸುವುದು, ಅವರ ಸಹಜ ವಿಕಾಸದ ಪ್ರಕ್ರಿಯೆಯನ್ನು ಮುರುಟಿಸುತ್ತದೆ. ಈ ಅಸಹಜ ಸನ್ನಿವೇಶ ಎರಡು ಹೊರದಾರಿಗಳನ್ನು ಹುಟ್ಟಿಸುತ್ತದೆ. ಒಂದು- ಶ್ರೇಷ್ಠವೆನಿಸಿರುವ ಭಾಷಿಕ ರೂಪವನ್ನು ಕುರುಡಾಗಿ ಅನುಕರಿಸುವುದಕ್ಕೆ. ಕರ್ನಾಟಕದ ನಗರ ಮಧ್ಯಮವರ್ಗದ

ಮುಸ್ಲಿಮರು ಫಾರಸಿಯುಕ್ತ ಉರ್ದುವನ್ನು ವೈಯಾರದಲ್ಲಿ ಬಳಸುವುದರಲ್ಲಿ ಇದನ್ನು ಗಮನಿಸಬಹುದು. ಎರಡು– 'ಒರಟು' ಎನಿಸಿಕೊಂಡಿರುವ ರೂಪವನ್ನೇ ಕೆಚ್ಚಿನಿಂದ ಬಳಸುವುದು. ಉತ್ತರ ಕರ್ನಾಟಕದ ಕೆಲವು ಲೇಖಕರು ಮೈಸೂರು ಬೆಂಗಳೂರಿಗೆ ಹೋದರೂ ಜಿಗುಟುತನದಿಂದ ತಮ್ಮ ಪ್ರಾದೇಶಿಕ ರೂಪವನ್ನೇ ಬಳಸುತ್ತಿರುವರು. ಆದರೂ ಈ ಕೆಚ್ಚು ಕೆಲವರ ವೈಯಕ್ತಿಕ ಹಠವಾಗಿ ಉಳಿದಿಕೊಂಡಿದೆ. ಅದು ಬರೆಹಕ್ಕೆ ವಿಸ್ತರಣೆಯಾಗಿಲ್ಲ.

ಟಪ್ಪಾಲು ಮುಟ್ಟಿತು ಎನ್ನುವುದಕ್ಕೂ ಪತ್ರ ತಲುಪಿತು ಎನ್ನುವುದಕ್ಕೂ ಅರ್ಥ ವ್ಯತ್ಯಾಸವಿಲ್ಲ. ಭಾವ ಮತ್ತು ಸೊಗಡಿನಲ್ಲಿ ಭಿನ್ನತೆಯಿದೆ. ಸ್ನಾನ, ಮೈತೊಳೆ, ಜಳಕಗಳ ನಡುವೆ, ಆಕಳು–ಹಸು–ಗೋವುಗಳ ನಡುವೆ ಪ್ರಾದೇಶಿಕ ಮಾತ್ರವಲ್ಲ, ಸಾಂಸ್ಕೃತಿಕ ಫರಕೂಗಳೂ ಇವೆ. ತೆಲುಗಿನಲ್ಲಿ ಮಳೆಯ ಅರ್ಥವುಳ್ಳ 'ಯಾನಮು' ಮತ್ತು 'ವರ್ಷಮು'ಗಳು ಬಳಸುವುದರ ಸ್ಥಾನನಿರ್ಣಯ ಮಾಡುತ್ತವೆ. ಸಮುದಾಯಗಳು ತಮ್ಮ ಭಾಷಿಕ ರೂಪಗಳನ್ನು ಕೀಳರಿಮೆಯಿಲ್ಲದೆ ಬಳಸುವುದು ಪ್ರಜಾಸತ್ತಾತ್ಮಕ ಹಕ್ಕಿನ ಸಂಗತಿ. ಆಯಾ ಪ್ರದೇಶದ ಅಥವಾ ಸಮುದಾಯಗಳ ಆಲೋಚನಕ್ರಮ, ಅನುಭವಜಗತ್ತು, ತಾತ್ವಿಕನಂಬಿಕೆ, ಸಾಂಸ್ಕೃತಿಕ ನಡಾವಳಿಗಳು, 'ಒರಟು' ಎನಿಸಿಕೊಂಡ ರೂಪಗಳಲ್ಲಿ ಕ್ಷೀರದೊಳಗಣ ಘೃತದಂತೆ ಅಡಗಿರುತ್ತವೆ. ಈ ಸಾಂಸ್ಕೃತಿಕ ಅನನ್ಯತೆ ಮಾತು ಬರೆಹಗಳ ಮೂಲಕ ಲೋಕಕ್ಕೆ ಲೇಖಕರು ಕಾಣಿಸುವರು. ಇದು ಅವರ ಸಾಂಸ್ಕೃತಿಕ ಹೊಣೆ ಕೂಡ. ಶ್ರೇಷ್ಠ ಶುದ್ಧ ನೈಸು ಅನಿಸಿಕೊಂಡಿರುವ ರೂಪಗಳಲ್ಲಿರದ ಕಸುವು 'ಒರಟು' 'ಕಲಬೆರಕೆ' 'ಕೀಳು' ಎನಿಸಿದ ರೂಪಗಳಲ್ಲಿ ಇರುವುದುಂಟು. ಪ್ರಮಾಣೀಕರಣ ಪಡೆದ ರೂಪಗಳು ಅತಿಬಳಕೆಯಿಂದ ಸವೆದಿರುತ್ತವೆ; ಒರಟೆನಿಸಿಕೊಂಡ ರೂಪವಿನ್ಯಾಸಗಳು ತಾಜಾತನದಿಂದ ಬೆಳಗುತ್ತಿರುತ್ತವೆ. ತಮ್ಮ ಮೇಲೆ ಕವಿದುಬಿದ್ದಿರುವ ಕೀಳರಿಮೆಯ ಧೂಳಿನ ದೆಸೆಯಿಂದ ಅವು ವಿಭಿನ್ನ ನಿಯೋಗಗಳಲ್ಲಿ ಬಳಕೆಯಾಗದೆ ಹಿಂಜರಿದು ನಿಂತಿರುತ್ತವೆ. ಈ ಹಿಂಜರಿಕೆ ಕೆಲವೊಮ್ಮೆ ಅವುಗಳ ಕಣ್ಮರೆಗೆ ಕಾರಣವಾಗಬಹುದು.

ಉರ್ದು ಗಾದೆ ಮತ್ತು ನುಡಿಗಟ್ಟುಗಳನ್ನು ನೋಡುವಾಗ ನನಗೆ ಈ ಘೋರಸತ್ಯ ಹೊಳೆಯುತ್ತದೆ. ಅಲ್ಲಿ ಜೀವಂತಿಕೆಯಿಂದ ನಳನಳಿಸುವ ಎಷ್ಟೊಂದು ಗಾದೆಗಳಿವೆ. 'ಜೀನಾ ಕರಗೆ ಹವ್ವಾ, ಗಾಂಡಕೊ ಬಂದಿ ತವ್ವಾ' (=ಬಾಳುವೆ ಮಾಡೆ ಹವ್ವಕ್ಕ ಅಂದರೆ ಕುಂಡೆಗೆ ಕಾವಲಿ ಕಟ್ಕೊಂಡಿದ್ದಳಂತೆ) ಇವುಗಳಲ್ಲೊಂದು. ಇವು ಜನಬಳಕೆಯಲ್ಲಿ ಮುಜಗರವಿಲ್ಲದೆ ಸಹಜವಾಗಿ ಬಳಕೆಯಾಗುತ್ತವೆ. ಇವುಗಳಲ್ಲಿರುವ ನೇರಗುಣ, ತೀಕ್ಷ್ಣತೆ, ಹರಳುಗಟ್ಟಿದ ಅನುಭವ, ಕಾವ್ಯದ ಲಯಬದ್ಧತೆ ಮತ್ತು ಸಂಕ್ಷಿಪ್ತತೆ, ಧ್ವನಿಪೂರ್ಣತೆಯು ಜೀವಂತವಾಗಿದೆ. ನಗರ ಪ್ರದೇಶದ ಮಧ್ಯಮವರ್ಗದ ಜನರ ಪ್ರೌಢಉರ್ದುವಿಗೆ ಹೋಲಿಸಿದರೆ ಇದರ ಶಕ್ತಿ ಜಗಮಗಿಸುತ್ತದೆ. ಆದರೆ ಉರ್ದು ಲೇಖಕರು ಇದರ ಅನುಸಂಧಾನವನ್ನೇ ಮಾಡಿದಂತಿಲ್ಲ. ಫಾರಸಿಭೂಯಿಷ್ಠ ರಮ್ಯ ಉರ್ದುವಿನ ಯಜಮಾನಿಕೆಯಲ್ಲಿ ಅವರ ಬರೆಹ ಮಾತು ಬಳಲುತ್ತಿವೆ.

ಕನ್ನಡದ ಅನೇಕ ಲೇಖಕರು ಪ್ರಾದೇಶಿಕ 'ಒರಟು' ಕನ್ನಡವನ್ನು ತಮ್ಮ ಬರೆಹದಲ್ಲಿ ಬಳಸಿದರು. ಇದನ್ನು ಪಾತ್ರಗಳಾಡುವ ಸಂಭಾಷಣೆಯಲ್ಲಿ ಮಾತ್ರವಲ್ಲ, ಅದರ ಹಿಂದೆ ಮುಂದೆ ಇರುವ ನಿರೂಪಣ ಭಾಷೆಯಲ್ಲೂ ತಂದರು. ಕೀಳೀಕರಿಸಿದ ಭಾಷಿಕ ರೂಪಗಳನ್ನು ತಿಳಿವಿನ ಅನುಸಂಧಾನದೊಳಗೆ ತರುವುದು ಅಸ್ಮಿತೆ ಹೋರಾಟ ಮಾತ್ರವಲ್ಲ, ಸಮಾಜವಾದಿ ಕ್ರಿಯೆ ಕೂಡ. ಇದು ಆರೋಗ್ಯಕರ ಸಮಾಜವನ್ನು ಕಟ್ಟುವಾಗ, ಎಲ್ಲ ಜನವರ್ಗಗಳನ್ನು ಒಳಗೊಳ್ಳುವ ಅಭಿವೃದ್ಧಿ ಮೀಮಾಂಸೆಗೆ ಸಂಬಂಧಿಸುವ ತತ್ವ ಸಹ.

ತಿಂಗಳ ಕವನಕ್ಕೊಂದು ಟಿಪ್ಪಣಿ

ಹಲವು ಆಡಳಿತ ಪ್ರದೇಶಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಒಗ್ಗೂಡಿ, ಕರ್ನಾಟಕ ರಾಜ್ಯದ ಉದಯವಾದ ಸಂಭ್ರಮದ ಸಂದರ್ಭದಲ್ಲಿ ಕವಿ ಡಿ.ಎಸ್. ಕರ್ಕಿಯವರು ರಚಿಸಿದ್ದ ಕವಿತೆ "ಹಚ್ಚೇವು ಕನ್ನಡದ ದೀಪ..." ಈಗ ಕನ್ನಡಿಗರ ಅಭೀಪ್ಸಾಗೀತೆಯಾಗಿದೆಯೆಂದರೆ ತಪ್ಪಾಗಲಾರದು. ನಮ್ಮ ಸಂಪ್ರದಾಯದಲ್ಲಿ ಶುಭಕಾರ್ಯಗಳು ದೀಪ ಬೆಳಗುವುದರ ಮೂಲಕ ಆರಂಭವಾಗುತ್ತವೆ. "ಶುಭಂ ಕರೋತಿ ಕಲ್ಯಾಣೀ..." ಎಂದು ಪ್ರಾರಂಭವಾಗುವ ಪ್ರಾರ್ಥನೆಯೊಂದಿಗೆ ದೀಪವನ್ನು ಬೆಳಗಿಸಿ, ಮುಂದೆ ನಡೆಯಲಿರುವ ಎಲ್ಲ ಕಾರ್ಯಕ್ರಮಗಳೂ ಶುಭದಲ್ಲಿ ಪರ್ಯವಸಾನವಾಗಲೆಂದು ಹಾರೈಸುವುದು ನಮ್ಮ ಪದ್ಧತಿ. ಆದ್ದರಿಂದಲೇ ಕರ್ನಾಟಕ ರಾಜ್ಯೋದಯದ ದಿವ್ಯಕ್ಷಣವನ್ನು ಕವಿ "ಹಚ್ಚೇವು ಕನ್ನಡದ ದೀಪ" ಎಂದು ಭಾವನಾತ್ಮಕ ದೀಪ ಬೆಳಗಿಸುವ ಮೂಲಕ ಸಂಭ್ರಮಿಸಿದ್ದಾರೆ.

ಕವಿ ಹಚ್ಚುವ ದೀಪವಾದರೂ ಎಂಥದು? ಅದು ಅಖಂಡ ಕರ್ನಾಟಕದ ಮನೆ–ಮನಗಳಲ್ಲಿ ಬೆಳಗುವ ದೀಪ, ಅರ್ಥಾತ್ 'ಕರುನಾಡ ದೀಪ'. ಅಷ್ಟು ಮಾತ್ರವಲ್ಲ, ಅತ್ಯಂತ ಶ್ರೀಮಂತವಾದ ಕನ್ನಡ ಭಾಷೆಯ ಹಿರಿಮೆಯನ್ನು ಜ್ವಲಂತವಾಗಿ ಬೆಳಗಿಸುವ 'ಸಿರಿನುಡಿಯ ದೀಪ'ವೂ ಹೌದು. ಭಾಷೆ ಎಂಬುದು ಮನುಷ್ಯ–ಮನುಷ್ಯರ ನಡುವಣ ಭಾವಸೇತು. ಕನ್ನಡಿಗರ ನಡುವೆ ಭಾವನಾತ್ಮಕ ಬೆಸುಗೆ ಹಾಕುವ ದೀಪವಾಗಿರುವುದರಿಂದ ಅದು 'ಒಲವೆತ್ತಿ ತೋರುವ ದೀಪ'ವಾಗಿಯೂ ಬೆಳಗುತ್ತದೆ.

ಮೂರು ಚರಣಗಳಲ್ಲಿ ಹರಡಿಕೊಂಡಿರುವ ಈ ಕವಿತೆಯಲ್ಲಿ ಕನ್ನಡದ ಜನ ನಾಡಿಗಾಗಿ, ಭಾಷೆಗಾಗಿ ಮಾಡಬೇಕಾಗಿರುವ ಕರ್ತವ್ಯಗಳ ಪ್ರಸ್ತಾಪವಿದೆ. ಮೊಟ್ಟಮೊದಲು ಕನ್ನಡಿಗರು ತಮ್ಮ ಅಸ್ಮಿತೆಯ ಸುತ್ತ ಆವರಿಸಿರುವ ವಿಸ್ಮೃತಿಯ ಕೊಳೆಯನ್ನು ತೊಳೆದುಹಾಕಬೇಕು; ನಾಡಿನ ಆದ್ಯಂತ ಕನ್ನಡದ ಅಭಿಮಾನ ಪ್ರಕಟವಾಗಬೇಕು; ಕನ್ನಡಿಗರ ನರನರಗಳಲ್ಲಿ ಕನ್ನಡತನ ಹುರಿಗೊಂಡು ದೀಪದಂತೆ ಜ್ವಲಿಸುವಂತಾಗಬೇಕು; ಕನ್ನಡದ ಕೆಲಸಕ್ಕೆ ಪ್ರೀತಿಯದೇ ದೃಢ ಆಧಾರವಿರಬೇಕು; ದ್ವೇಷದ ಕಿಡಿಗಳು ಹೃದಯಗಳ ಗಡಿನಾಡಿನ ಆಚೆಯಿರಬೇಕು; ಹೀಗೆ ಪ್ರಖರವಾಗಿ ಬೆಳಗುವ ದೀಪದ ನೆರವಿನಿಂದ ಕನ್ನಡತಾಯಿಯ ದಿವ್ಯರೂಪ ಸ್ಪಷ್ಟವಾಗಿ ಎಲ್ಲರಿಗೂ ಕಾಣುವಂತಾಗಬೇಕು... ಹೀಗೆ ಕವಿತೆಯುದ್ದಕ್ಕೂ ಕವಿ ಪ್ರತೀಕ್ಷೆ, ನಿರೀಕ್ಷೆ, ಹಾರೈಕೆಗಳನ್ನು ಸೂಚಿಸುತ್ತಾ ಹೋಗಿದ್ದಾರೆ. ಪರಂಪರೆಯ ಬೆಳಕಿನಲ್ಲಿ ಪ್ರಸ್ತುತವನ್ನು ನಿರ್ಮಿಸುತ್ತಾ, ಕನ್ನಡದ ಭವಿಷ್ಯವನ್ನು ಇನ್ನಷ್ಟು ಸುಂದರಗೊಳಿಸಬೇಕು ಎಂದು ಸೂಚಿಸುವುದಕ್ಕಾಗಿಯೇ ಪ್ರತಿ ಚರಣದಲ್ಲೂ 'ಹಿಡಿ, ನೆನಪ!' – ಎಂಬುದನ್ನು ಕವಿ ಪುನರಾವರ್ತನೆ ಮಾಡಿದ್ದಾರೆ.

ಭಾವಶ್ರೀಮಂತಿಕೆಯಿಂದ, ಗೇಯತೆಯಿಂದ ಕೂಡಿರುವ ಈ ಕವಿತೆಯನ್ನು ಕೇವಲ, ಹಾಡಿ, ಕೇಳಿ ಸುಖಿಸಿದರಷ್ಟೇ ಸಾಲದು. ಅದು ಸೂಚಿಸಿರುವ ಕರ್ತವ್ಯಗಳನ್ನು ಕಾರ್ಯರೂಪಕ್ಕೆ ತರುವ ಕೆಲಸವನ್ನು ಕೈಗೆತ್ತಿಕೊಂಡಾಗ ಮಾತ್ರ ಕವಿತೆ 'ಸಾರ್ಥಕ'ವೆನ್ನಿಸುತ್ತದೆ.

– ಎನ್. ಶ್ರೀನಿವಾಸ ಉಡುಪ

ನಿಲುವು

ಮತ್ತೊಂದು ವರ್ಷ ಉರುಳಿದೆ. ಕರ್ನಾಟಕ ೬೧ ದಾಟಿ ೬೨ಕ್ಕೆ ಕಾಲಿಟ್ಟಿದೆ. ಒಂದು ದೇಶದ ಸಂಪನ್ನವಾಗುವುದಕ್ಕೆ ಇಷ್ಟು ಕಾಲ ಸಾಕು. ಚಾರಿತ್ರಿಕವಾಗಿ ಬಳುವಳಿಯಾಗಿ ಬಂದ ಏನೇನೋ ಮಿತಿಗಳು, ಸಂಕಟಗಳನ್ನೂ ಕೂಡಾ ಸವಾಲಾಗಿ ಸ್ವೀಕರಿಸಿ ಸಮೃದ್ಧ ನಾಡಾಗಿ ಕಟ್ಟಲು ಇಷ್ಟು ಸಮಯ ಬೇಕಷ್ಟಾಯಿತು.

ಆದರೆ ಈಗಲೂ ನಾವು ಕರ್ನಾಟಕದ ಅಸಮ ಬೆಳವಣಿಗೆ ಬಗ್ಗೆ ಮಾತಾಡುತ್ತಿದ್ದೇವೆ. ನಾಡುನುಡಿ- ಸಂಸ್ಕೃತಿಯ ಅಭದ್ರ ಸ್ಥಿತಿ ಬಗ್ಗೆ ಮಾತಾಡುತ್ತಿದ್ದೇವೆ. ಆಧುನಿಕತೆಯ ಧಾಳಿಗೆ ಪಕ್ಕಾಗಿ ದೇಸೀ ಪರಂಪರೆ ಮ್ಯೂಸಿಯಂ ವಸ್ತುಗಳಾಗುವ ಸಂದರ್ಭದಲ್ಲಿ ಇಂಥಾ ಆತಂಕದ ಮಾತುಗಳು ಬರುತ್ತವೆ; ಇಲ್ಲಾ, ಏಳಿಗೆಯಾಗದೇ ದೈನೇಸಿ ಸ್ಥಿತಿಯಲ್ಲಿದ್ದಾಗಲೂ ಈ ಮಾತು ಬರುತ್ತದೆ. ಕರ್ನಾಟಕದ ಮಟ್ಟಿಗೆ ಈ ಎರಡೂ ಎದುರು-ಬದಿರು ಸವಾಲುಗಳನ್ನು ದಿಟ್ಟಿಸುತ್ತಾ ನಾವು ಪ್ರತಿಕ್ರಿಯಿಸಬೇಕಾಗಿದೆ. ಇದರಲ್ಲಿ ಸೆಡವಿಗಿಂತ ವಿಷಣ್ಣ ಭಾವವೇ ಹೆಚ್ಚು.

ಭಾಷೆ-ಸಾಹಿತ್ಯದ ದೃಷ್ಟಿಯಿಂದ ಕನ್ನಡದಂಥಾ ಭಾಷೆಗೆ ಅಳಿವಿಲ್ಲ. ಅದು ಸೃಷ್ಟಿಸುವ ಹೊಸ ಸಂವೇದನೆ, ಸಾಹಿತ್ಯ, ಸಾಂಸ್ಕೃತಿಕ ರೂಪಗಳಿಗೂ ಅಳಿವು ಬಾರದು. ಕನ್ನಡ ಮಾತಾಡುವ ಮಂದಿಯ ಜನಸಂಖ್ಯೆ ಯುರೋಪು/ಏಷ್ಯಾಗಳ ಎಷ್ಟೋ ದೇಶಗಳ ಜನಸಂಖ್ಯೆಗಿಂತ ಜಾಸ್ತಿ. ಆದರೆ ಸಮಸ್ಯೆ ಕೇವಲ ನಾಶದ್ದಲ್ಲ. ಬದುಕಿನ ಭದ್ರತೆ, ಸಂತಸದ ಸೂಚಿ, ಒಂದು ಭಾಷೆ ಮತ್ತು ಅದರ ಸಾಂಸ್ಕೃತಿಕ ರೂಪಗಳು. ಇದು ನಶಿಸುವುದು, ವಿಘಟನೆಗೊಳ್ಳುವುದು ಅಂದರೆ ನಾಡಿನ ಸಮುದಾಯದ ಬದುಕಿನಲ್ಲಿ ಏರುಪೇರು ಆಗುತ್ತಿದೆ ಎಂದರ್ಥ.

ಈ ಏರುಪೇರು ಎರಡು ಅತಿಗಳಲ್ಲಿ ಜರುಗುತ್ತಿರುವುದು ಕಣ್ಣಿಗೆ ಗಿಡಿಯುತ್ತಿದೆ. ೧. ಜಾಗತೀಕರಣದ ಉದ್ಯೊಗ, ಅವಕಾಶ ಮತ್ತು ಆಧುನೀಕರಣದ ಕಾರಣಕ್ಕೆ ಜರುಗುತ್ತಿರುವ ನಗರೀಕರಣ. ಈ ನಗರಗಳು ಬದುಕಿನ ಶೈಲಿಯನ್ನೂ ನಿರ್ಧರಿಸುತ್ತವೆ. ಇದು ನಗರೀಕರಣಕ್ಕೆ ಒಪ್ಪಿಸಿಕೊಳ್ಳುವವನಿಗೆ ಇರುವ ಪೂರ್ವ ಶರತ್ತು ಎಂಬಂತೆ ಇದೆ. ಈ ಜೀವನ ಶೈಲಿ ನಿತ್ಯ ಬದುಕನ್ನು ಪರಾವಲಂಬಿಗೊಳಿಸುತ್ತೆ ಮತ್ತು ಎಲ್ಲವನ್ನೂ ಹಣದ ಚಲಾವಣೆ ಮೂಲಕ ನಿರ್ಧರಿಸುತ್ತೆ. ಈ ಸೂಕ್ಷ್ಮ ಪಲ್ಲಟದಿಂದಾಗಿ ಗೋವಿನ ಹಾಡು ಮಕ್ಕಳ ಬಾಯಲ್ಲಿ ಬಿಡಿ ದೊಡ್ಡವರ ಬಾಯಲ್ಲೂ ಬರುವುದು ಅಶಕ್ಯ. ಮಾತೃ ಭಾಷೆಯಲ್ಲದ ಭಾಷೆಯೊಂದು ಬದುಕಿನ ಹಾವಭಾವ, ಹೆಜ್ಜೆ-ಗತಿಗಳನ್ನು ನಿರ್ಧರಿಸುವಾಗ ಈ ಪಲ್ಲಟ ಬರುತ್ತದೆ.

ಇನ್ನೊಂದೆಡೆ, ಗ್ರಾಮೀಣ/ಕೃಷಿ ಲೋಕದ ಕರ್ನಾಟಕ ತನ್ನ ಸಂಪನ್ಮೂಲ ಮತ್ತು ಸಂಪನ್ನತೆ ಎರಡನ್ನೂ ಕಳೆದುಕೊಂಡು ದಿಕ್ಕೆಡುತ್ತಿದೆ. ಅರುತ್ತರ ದಶಕದ ಸಿನೆಮಾಗಳಲ್ಲಿ; ಕೆ ಎಸ್ ನ ಅವರ ಕವನಗಳಲ್ಲಿ ಕಾಣುವ ಗ್ರಾಮ ಲೋಕ ಆಂತರಿಕ ಅವಜ್ಞೆ ಮತ್ತು

ಬಾಹ್ಯ ಒತ್ತಡಗಳಿಂದ ನಾಶವಾಗಿ ತಲೆಮಾರೇ ಕಳೆದಿದೆ. ದೇಸೀ ಜ್ಞಾನವಾಗಲೀ; ಕಲೆ ಸಂಸ್ಕೃತಿಯ ಪ್ರತಿಭೆಯಾಗಲೀ, ಕುಶಲ ವೃತ್ತಿಗಳಾಗಲೀ ಸ್ಥಳಿಯ ಬೆರಗನ್ನೂ ಒತ್ತಾಸೆಯನ್ನೂ ಕಳೆದುಕೊಂಡಿದೆ. ಇನ್ನೊಂದೆಡೆ ಜೀವನೋಪಾಯಗಳ ಒತ್ತಡದಿಂದಾಗಿ ಮಣ್ಣು, ನೀರು ಎರಡನ್ನೂ ಹೀರಿ ಕೂತಿರುವ ಸಮುದಾಯವನ್ನು ಕಂಡರೆ ಒಂದು ನಾಗರಿಕತೆ ಇಷ್ಟು ಬೇಗ ಸ್ವನಾಶದ ಚಟವನ್ನು ಬೆಳೆಸಿಕೊಳ್ಳುವುದು ಹೇಗೆ ಸಾಧ್ಯ ಅನ್ನಿಸುತ್ತದೆ.

ಅಮೆರಿಕಾ, ಆಫ್ರಿಕಾ, ಆಸ್ಟ್ರೇಲಿಯಾಗಳ ನಿವಾಸಿಗಳಲ್ಲಿ ಕನಿಷ್ಠ ವಸಾಹತುಶಾಹೀ ದಮನದ ಕಾರಣಕ್ಕೇ ಅಸ್ಮಿತೆಯ ಪ್ರತಿಕ್ರಿಯೆಗಳು ಹುಟ್ಟಿವೆ. ನಮ್ಮಲ್ಲಿ ಅಂಥಾ ಅಸ್ಮಿತೆಯ ಪ್ರೇರಣೆಗಳೂ ಇಲ್ಲ. ಜಾತಿ, ಕೋಮು ಆಧಾರಿತ ಹುಸಿ ಅಸ್ಮಿತೆಗಳೆಲ್ಲಾ ತತ್ಕಾಲೀನ ಲಾಭದ ಹವಣಿಕೆಯಿಂದಾಚೆ ಕಣ್ಣು ನೆಟ್ಟಿಲ್ಲ.

ಇದರೊಂದಿಗೇ ಆಧುನಿಕ ಸಾಂಸ್ಥಿಕ ಭ್ರಷ್ಟಾಚಾರವೂ ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ಪ್ರವೇಶವಾಗಿದೆ. ಅಂದರೆ ನೈತಿಕ ಅಧಃಪತನವೂ ಭೌತಿಕ ಅಧಃಪತನವೂ ಹೆಣೆದುಕೊಂಡಿರುವ ವಿಚಿತ್ರ ಕಾಲಘಟ್ಟವನ್ನೂ ಗ್ರಾಮಾಂತರ ಕರ್ನಾಟಕವಷ್ಟೇ ಅಲ್ಲ ನಗರಗಳೂ ಪ್ರವೇಶಿಸಿವೆ.

ನಾಡು ನಿರ್ವಿಣ್ಣ ಸ್ಥಿತಿ ತಲುಪುವ ಹಂತ ಇದು. ಅಭಿವೃದ್ಧಿಯ ಕೆಲವು ಸೂಚ್ಯಂಕಗಳು ಸದಾ ಕಣ್ಣಿಗೆ ಗಿಡಿಯುವಂತೆ ನಮ್ಮ ಆರ್ಥಿಕ ಯೋಜನೆಗಳಿರುವ ಕಾರಣ ಆತ್ಯಂತಿಕ ಪರಿಣಾಮದ ವಿವರಗಳು ಅಂಚಿಗೆ ಸರಿಯಬಹುದು. ಅದು ನಮ್ಮ ಕಣ್ಣಿಗೆ ಬೀಳದಂತೆ ನೋಡಿಕೊಳ್ಳಬಹುದು. ಆದರೆ ಅದು ಬೇತಾಳದಂತೆ ಬೆನ್ನು ಹತ್ತುತ್ತಿರುತ್ತದೆ. ಒಂದು ಬರಗಾಲ, ಒಂದು ರೋಗಬಾಧೆ ಇದನ್ನು ಗಮನದ ಕೇಂದ್ರಕ್ಕೆ ತರಬಲ್ಲುದು.

ಸುಸ್ಥಿರ ಅಭಿವೃದ್ಧಿಯ ಗುರಿ ತನ್ನದೂ ಎಂದು ನಮ್ಮ ಸರ್ಕಾರ ಹೇಳಿಕೊಂಡಿದೆ. ಆದರೆ ಈ ಗುರಿಯ ಕಡೆಗೆ ಹೋಗುವ ಯಾವ ಸೂಚನೆಯೂ ಯೋಜನೆಗಳಲ್ಲಿ ಪ್ರತಿಫಲಿಸುತ್ತಿಲ್ಲ. ನಿತ್ಯಬದುಕಿನ ನೆಮ್ಮದಿಯನ್ನು ಸಾಧಿಸಿದಾಗಲೇ ಕಲೆ ಸಂಸ್ಕೃತಿಗೊಂದು ಹೊಸ ಆಯಾಮ ಬರುವುದು. ಇಲ್ಲವಾದರೆ ಅದೂ ಆತ್ಮವಂಚನೆಯ ಒಂದು ರೂಪಕವಾದಿತು.

ಆದ್ದರಿಂದಲೇ ಈ ರಾಜ್ಯೋತ್ಸವ ಹೊಸ ಚಿಂತನೆಗಳನ್ನು ಚಿಗುರಿಸುವಂತಾಗಲಿ. ಸರ್ಕಾರ, ಜನಪ್ರತಿನಿಧಿಗಳು ಮತ್ತು ಜನಸಮುದಾಯಗಳು ಇಷ್ಟು ದಿನದ ಕಾರ್ಯವೈಖರಿಯ ವೈಪರೀತ್ಯವನ್ನು ಸರಿಪಡಿಸುವಂಥಾ ಹೆಜ್ಜೆ ಹಾದಿ ಪಡೆಯಲಿ.

●

ನೂರು ವರ್ಷದ ಹಿಂದೆ ಗಾಂಧಿ

ಗಾಂಧಿ ಆಫ್ರಿಕಾದಿಂದ ಹಿಂದಿರುಗಿ ರಾಷ್ಟ್ರ ರಾಜಕಾರಣದಲ್ಲಿ ಭಾಗವಹಿಸಲು ಪ್ರಾರಂಭಿಸಿ ಸುಮಾರು ಎರಡೂವರೆ ವರ್ಷ ಸಂದಿದೆ. ನವೆಂಬರ್ ೧೯೧೭ರ ಮೊದಲವಾರ ಗಾಂಧಿ ಗುಜರಾತಿನ ಗೋಧ್ರಾದಲ್ಲಿದ್ದಾರೆ. ಅಲ್ಲಿ ಮೊದಲ ಗುಜರಾತಿ ರಾಜಕೀಯ ಸಮ್ಮೇಳನದ ಅಧ್ಯಕ್ಷತೆ ಅವರದಾಗಿದೆ. ಸಮ್ಮೇಳನದ ಮೊದಲ ದಿನ ಉದ್ಘಾಟನಾ ಸಮಾರಂಭಕ್ಕೆ ಲೋಕಮಾನ್ಯ ತಿಲಕರು ೪೫ ನಿಮಿಷ ತಡವಾಗಿ ಬಂದಿದ್ದಾರೆ. ಸ್ವರಾಜ್ಯ ಪಡೆಯುವ ಉದ್ದೇಶದಿಂದ ಆಯೋಜಿಸಿರುವ ಮಹತ್ವದ ಸಭೆಗೆ ಒಬ್ಬರು ೪೫ ನಿಮಿಷ ತಡವಾಗಿ ಬರಬಹುದು ಎಂದು ಭಾವಿಸಿದರೆ ಅದಕ್ಕೆ ಅನುಗುಣವಾಗಿ ಸ್ವರಾಜ್ಯವೂ ತಡವಾಗಿ ಬಂದರೆ ಯೋಚಿಸುವ ಅಗತ್ಯವಿಲ್ಲ ಎಂದು ತಿಲಕರು ತಡವಾಗಿ ಬಂದುದಕೆ ವ್ಯಂಗ್ಯ ಮಾಡುತ್ತಾರೆ. ತಾವು ಬರೆದು ತಂದಿದ್ದ ಅಧ್ಯಕ್ಷೀಯ ಭಾಷಣವನ್ನು ಓದುತ್ತಾರೆ. ಮೂರು ದಿನದ ಈ ಸಮಾವೇಶದಲ್ಲಿ ಮೂರು ದಿನವೂ ಗಾಂಧಿ ಮಾತನಾಡುತ್ತಾರೆ. ಆ ಭಾಷಣದಲ್ಲಿ ದೇಶದ ದುಸ್ಥಿತಿಯನ್ನು ವಿವರವಾಗಿ ವಿವರಿಸುತ್ತಾರೆ. ದೇಶಕ್ಕೆ ಮಾರಕವಾಗಿರುವ ಪ್ಲೇಗ್ ಮತ್ತು ಕಾಲರಾ ಕಾಯಿಲೆಗಳ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಗುಜರಾತಿನಲ್ಲಿ ಡೇರಿ ನಡೆಸುವ ಶ್ರೀಮಂತರು ರೈತರಿಂದ ಹಾಲು ಕೊಂಡು, ಬೆಣ್ಣೆ ಮಾಡಿ ಶ್ರೀಮಂತರಿಗೆ ಮಾರುವ ಬಗ್ಗೆಯೂ ಆಕ್ಷೇಪ ಎತ್ತುತ್ತಾರೆ. ದೇಶದ ಮಕ್ಕಳ ಹೆಚ್ಚಿನ ಪೌಷ್ಟಿಕಾಂಶ ಹಾಲಿನಿಂದ ಬರುತ್ತಿರುವಾಗ ಅವರಿಗೆ ಹಾಲು ಸಿಗದಂತೆ ಮಾಡಿ ಶ್ರೀಮಂತರಿಗೆ ಬೆಣ್ಣೆ ಗಿಣ್ಣು ತಿನ್ನಿಸುವುದು ಎಷ್ಟು ಸರಿ? ಎಂದು ಪ್ರಶ್ನಿಸುತ್ತಾರೆ. ಗೋವಿನಿಂದಾಗಿ ಉದ್ಭವಿಸಿರುವ ಹಿಂದೂ ಮುಸ್ಲಿಂ ಸಂಬಂಧದ ಸಮಸ್ಯೆಯನ್ನು ಪ್ರಸ್ತಾಪಿಸುತ್ತಾರೆ. ಅದಕ್ಕೆ ಪರಿಹಾವನ್ನೂ ಸೂಚಿಸುತ್ತಾರೆ. ನವೆಂಬರ್ ೫ ರಂದು ಗೋಧ್ರಾದಲ್ಲೇ ನಡೆದ 'ಅಂತ್ಯಜ'ರ ಸಮ್ಮೇಳನದಲ್ಲಿ ಮಾತನಾಡಿ ಅಸ್ಪೃಶ್ಯತೆ ಮಹಾಪಾಪ ಎಂದು ವಾದಿಸುತ್ತಾರೆ. ನವೆಂಬರ್ ಎರಡನೇ ವಾರ ಬಿಹಾರದ ಚಂಪಾರಣ್ಯಕ್ಕೆ ತೆರಳುತ್ತಾರೆ. ನವೆಂಬರ್ ೧೪ ದೀಪಾವಳಿಯ ದಿನ ಬೆಟಿಯಾ ಗ್ರಾಮದಿಂದ ಗಾಂಧಿ ಅನೇಕ ಬಂಧುಗಳಿಗೆ ಪತ್ರಿಸುತ್ತಾರೆ. ಮಗ ಹರಿಲಾಲ್‌ಗೂ ಕೂಡ ಬರೆದ ಚಿಕ್ಕ ಪತ್ರವೊಂದನ್ನು ಬರೆಯುತ್ತಾರೆ. ಅದರಲ್ಲಿ ಅವರಿಗೆ ದೀಪಾವಳಿ ಶುಭಾಷಯ ಕೋರಿ ನಿಮ್ಮಲ್ಲರ ಅಭಿಲಾಷೆಗಳು ಪೂರೈಸಲಿ, ನೀವೆಲ್ಲರೂ ನಿಮ್ಮ ಬದುಕಿನಲ್ಲಿ ನಡತೆ ಎಂಬ ಲಕ್ಷ್ಮಿಯನ್ನು ಹೆಚ್ಚಿಸಿ ಕೊಳ್ಳಿ. ನಿಜವಾದ ಲಕ್ಷ್ಮಿ ಎಂದರೆ ಸನ್ನಡತೆ. ನಮ್ಮೆಲ್ಲರ ಒಳಿತು ಅವಳನ್ನು ಆರಾಧಸುವುದರಲ್ಲಿದೆ ಎಂದು ಬರೆಯುತ್ತಾರೆ.*

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

MELKOTE

ಶ್ರೀಮತಿ/ ಶ್ರೀ...

....

....

..lvantha
Block,
agar,

JANAPADA VICHARA
Kannada Monthly Digest
janapada seva Trust Melkote, Dist- Mandya - 571431. Phone : 08236 299854
e-mail : janapada@yahoo.com - Web : janapadá.org
Printed at chandragiri printers, Mandya- Mob: 9945651584, 9739743237